₹ 4 ಪುಟ: 4 ಸಂಪುಟ: 4 ಸಂಚಿಕೆ 48
newsbelagavi@gmail.com 9900332089 9900332089



# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ

Volume : 4 Issue: 48 Wednesday, 05, APRIL, 2023 RNI: KARKAN/2020/79084 Regn,No:G-2/PMG/KA/NK/BM/139/2021-23 24



## ಕೆಲವು ಕ್ಷೇತ್ರಗಳಿಗೆ ಅಚ್ಚರಿ ಅಭ್ಯರ್ಥಿಗಳು ಆಯ್ಕೆ: ಸಿಎಂ ಬೊಮ್ಮಾಯಿ

ಬೆಂಗಳೂರು: ಮೇ ತಿಂಗಳಲ್ಲಿ ನಡೆಯುವ ವಿಧಾನಸಭೆ ಚುನಾವಣೆಗೆ ಹಲವಾರು ಮತಕ್ಷೇತ್ರಗಳಲ್ಲಿ ಬಿಜೆಪಿ ಹೊಸ ಪ್ರಯೋಗಕ್ಕೆ ಮುಂದಾಗಿದ್ದು, ಕೆಲವು ಕ್ಷೇತ್ರಗಳಿಗೆ ಅಚ್ಚರಿ ಅಭ್ಯರ್ಥಿಗಳು ಆಯ್ಕೆಯಾಗಲಿದ್ದಾರೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಸ್ಪಷ್ಟ ಸುಳಿವು ನೀಡಿದರು.

ಅವರು ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯಿಸಿ, ರಾಜ್ಯ ಚುನಾವಣಾ ಸಮಿತಿ ಸಭೆ ಇಂದು, ಕೋರ್ ಕಮಿಟಿ ಸಭೆ ನಾಳೆ ನಡೆಯಲಿದೆ ಎಂದರು.

ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ಅದನ್ನು ನಾವು ಕೇಂದ್ರ ಸಮಿತಿಗೆ ಶಿಫಾರಸು ಮಾಡಲಾಗುವುದು. ಏ.8ರಂದು ದೆಹಲಿಯಲ್ಲಿ ಸಂಸದೀಯ ಮಂಡಳಿ ಸಭೆ ನಿಗದಿಯಾಗಿದ್ದು, ಅದೇ ದಿನ ಅಭ್ಯರ್ಥಿಗಳ ಪಟ್ಟಿ ಪ್ರಟಕವಾಗಲಿದೆ ಎಂದು ಸಿಎಂ ಬೊಮ್ಮಾಯಿ ಹೇಳಿದರು.

ಮತ್ತೆ ಬಹುಮತದೊಂದಿಗೆ ಪಕ್ಷ ಅಧಿಕಾರಕ್ಕೆ ಬರಲಿದ್ದು, ಆಕಾಂಕ್ಷೆಗಳು ಹೆಚ್ಚಿರುವುದು ಸಹಜ.

ಈಗ ಆಯನೂರು ಮಂಜುನಾಥ್ ಮಾತ್ರ ಬಂಡಾಯವೆದ್ದಿದ್ದು, ಬೇರೆ ಯಾವುದೇ ಕ್ಷೇತ್ರದಲ್ಲಿ ಬಂಡಾಯದ ಸಮಸ್ಯೆಯಿಲ್ಲ ಎಂದು ಸಿಎಂ ಬೊಮ್ಮಾಯಿ ಸ್ಪಷ್ಟಪಡಿಸಿದರು.

# ಅರುಣಾಚಲ ಪ್ರದೇಶದ ಜಾಗಗಳ ಮರು ನಾಮಕರಣ

## ಚೀನಾ ವಿರುದ್ಧ ತುಟಿ ಬಿಚ್ಚದ ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್ ಕಿಡಿ

ನವದೆಹಲಿ: ಭಾರತದ ಅವಿಭಾಜ್ಯ ಅಂಗವಾಗಿರುವ ಅರುಣಾಚಲ ಪ್ರದೇಶದ ಜಾಗಗಳನ್ನು ತನ್ನದೆಂದು ಹೇಳಿಕೊಂಡಿರುವ ಚೀನಾ ಅದರ ಹೆಸರುಗಳನ್ನೂ ಕೂಡ ಬದಲಿಸಿದ್ದು, ಈ ಬಗ್ಗೆ ಪ್ರಧಾನಿ ಮೋದಿ ಮಾತನಾಡದೇ ಇರುವುದು ನಾಚಿಕೆಗೇಡು ಎಂದು ಕಾಂಗ್ರೆಸ್ ಕಿಡಿಕಾರಿದೆ.

ಅರುಣಾಚಲ ಪ್ರದೇಶದ ಹಲವು ಸ್ಥಳಗಳಿಗೆ ಚೀನಾ ಮರುನಾಮಕರಣ ಮಾಡಿದ್ದಕ್ಕೆ ಮಂಗಳವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಕಾಂಗ್ರೆಸ್, ಇದು ನೆರೆಯ ದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಕ್ಲೀನ್ ಚಿಟ್ ಮತ್ತು ಗಡಿಯಲ್ಲಿ ಚೀನಾದ ಕ್ರಮಗಳ ಬಗ್ಗೆ ಅವರ ನಿರ್ಗಳ ಮೌನದ ಪರಿಣಾಮವಾಗಿದೆ ಎಂದು ಹೇಳಿದೆ.

ಈ ಬಗ್ಗೆ ಟ್ವಿಟರ್ ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಕಾಂಗ್ರೆಸ್ ಪಕ್ಷ, 'ಭಾರತ–ಚೀನಾ ಗಡಿ ಪರಿಸ್ಥಿತಿ ಈಗ "ಸ್ಥಿರವಾಗಿದೆ" ಎಂದು ಚೀನಾದ ಉನ್ನತ ರಾಜತಾಂತ್ರಿಕರೊಬ್ಬರು ಇತ್ತೀಚೆಗೆ ಹೇಳಿದ್ದಾರೆ. ಆದರೆ ಚೀನಾದ ಪ್ರಚೋದನೆಗಳು ಮತ್ತು ಉಲ್ಲಂಘನೆಗಳು ಮುಂದುವರಿದಿವೆ. 2017 ಮತ್ತು 2021 ರಲ್ಲಿ ಮೊದಲು ಮಾಡಿದ ಅರುಣಾಚಲ ಪ್ರದೇಶದ ಸ್ಥಳಗಳಿಗೆ ಈಗ ಮೂರನೇ ಸೆಟ್ ನಲ್ಲಿ ಚೀನೀ ಹೆಸರುಗಳನ್ನು ಬಿಡುಗಡೆ ಮಾಡಲಾಗಿದೆ.



ಜೂನ್ 2020 ರಲ್ಲಿ ಚೀನಾಕ್ಕೆ ಪ್ರಧಾನಿ ಮೋದಿಯವರ ಕ್ಲೀನ್ ಚಿಟ್ ಮತ್ತು ಚೀನಾದ ಕ್ರಮಗಳ ಬಗ್ಗೆ ಅವರ ನಿರ್ಗಳ ಮೌನಕ್ಕಾಗಿ ದೇಶದ ಪ್ರಜೆಗಳು ಮೌಲ್ಯ ತೆರಬೇಕಾಗಿದೆ. ಸುಮಾರು ಮೂರು ವರ್ಷಗಳ ನಂತರ, ಚೀನಾದ ಪಡೆಗಳು ನಾವು ಹಿಂದೆ ಅಡೆತಡೆಯಿಲ್ಲದ ಪ್ರವೇಶವನ್ನು ಹೊಂದಿದ್ದ ಆಯಕಟ್ಟಿನ ಡೆಪ್ಸಾಂಗ್ ಬಯಲು ಪ್ರದೇಶಕ್ಕೆ ನಮ್ಮ ಗಸ್ತು ಪ್ರವೇಶವನ್ನು ನಿರಾಕರಿಸುವುದನ್ನು ಮುಂದುವರೆಸಿದೆ. ಮತ್ತು ಈಗ ಚೀನಿಯರು ಅರುಣಾಚಲ ಪ್ರದೇಶದ ಯಥಾಸ್ಥಿತಿಯನ್ನು ಹಾಳುಮಾಡಲು ಪ್ರಯತ್ನಿಸುತ್ತಿದ್ದಾರೆ. ಅರುಣಾಚಲ ಪ್ರದೇಶವು ಯಾವಾಗಲೂ ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗ ವಾಗಿದೆ. ಅರುಣಾಚಲ ಪ್ರದೇಶದ ಜನರು ಭಾರತದ ಹೆಮ್ಮೆ ಮತ್ತು ದೇಶಭಕ್ತ ಪ್ರಜೆಗಳು. ಈ ವಾಸ್ತವ ಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಲು ಭಾರತದ ಮತ್ತು ಎಲ್ಲಾ ಭಾರತೀಯರ ಸಾಮೂಹಿಕ ಸಂಕಲ್ಪದಲ್ಲಿ ಯಾವುದೇ ಸಂದೇಹವಿಲ್ಲ ಎಂದು ಕಾಂಗ್ರೆಸ್ ಹೇಳಿಕೆಯಲ್ಲಿ ಉಲ್ಲೇಖಿಸಿದೆ.

**ಚೀನಾ ವಿರುದ್ಧ ಖರ್ಗೆ ಕಿಡಿ**

ಇನ್ನು ಇದೇ ವಿಚಾರವಾಗಿ ಮಾತನಾಡಿರುವ ಎಐಸಿಸಿ ಅಧ್ಯಕ್ಷ ಕಲ್ಲಿಕಾರ್ಜುನ ಖರ್ಗೆ ಅವರು, 'ಮೋದಿಯವರು ಚೀನಾಕ್ಕೆ ಕ್ಲೀನ್ ಚಿಟ್ ನೀಡಿದ ಪರಿಣಾಮ ದೇಶವು ಎದುರಿಸುತ್ತಲೇ ಇದೆ. ಮೂರನೇ ಬಾರಿಗೆ ಚೀನಾ ಅರುಣಾಚಲ ಪ್ರದೇಶದಲ್ಲಿ ನಮ್ಮ ಪ್ರದೇಶಗಳನ್ನು ಮರುಹೆಸರಿಸಲು ಧೈರ್ಯ ಮಾಡಿದೆ. ಏಪ್ರಿಲ್ 21, 2017 -- 6 ಸ್ಥಳಗಳು, ಡಿಸೆಂಬರ್ 30, 2021 -- 15 ಸ್ಥಳಗಳು, ಏಪ್ರಿಲ್ 3, 2023 -- 11 ಸ್ಥಳಗಳ ಮರು ಹೆಸರಿಸಲಾಗಿದೆ. ಅರುಣಾಚಲ ಪ್ರದೇಶವು ಮತ್ತು ಉಳಿಯುತ್ತದೆ ಭಾರತದ ಅವಿಭಾಜ್ಯ ಅಂಗ ಎಂದು ಹೇಳಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಮಾತನಾಡಿ, 'ಗಾಲ್ವಾನ್ ನಂತರ, ಚೀನಾಕ್ಕೆ ಮೋದಿಜೀಯವರ ಕ್ಲೀನ್ ಚಿಟ್‌ನ ಪರಿಣಾಮಗಳನ್ನು ದೇಶ ಸಮಸ್ಯೆ ಎದುರಿಸುತ್ತಿದೆ. ಭಾರತ–ಚೀನಾ ಗಡಿಯಲ್ಲಿ ಪರಿಸ್ಥಿತಿ ಈಗ "ಸ್ಥಿರವಾಗಿದೆ" ಎಂದು ಇತ್ತೀಚೆಗೆ ಚೀನಾದ ಉನ್ನತ ರಾಜತಾಂತ್ರಿಕರೊಬ್ಬರು ಪ್ರತಿಪಾದಿಸಿದ್ದಾರೆ. ಆದರೆ ಚೀನಾದ ಪ್ರಚೋದನೆಗಳು ಮತ್ತು ಉಲ್ಲಂಘನೆಗಳು ಮುಂದುವರೆದಿದೆ. ಇದು ಈಗ ಅರುಣಾಚಲ ಪ್ರದೇಶದ ಸ್ಥಳಗಳಿಗೆ ಮೂರನೇ ಸೆಟ್ ಚೀನೀ ಹೆಸರುಗಳನ್ನು ಬಿಡುಗಡೆ ಮಾಡಿದೆ. ಇದಕ್ಕೂ ಮೊದಲು 2017 ಮತ್ತು 2021 ರಲ್ಲಿ ಚೀನಾ ಇದೇ ರೀತಿಯ ದುಸ್ಸಾಹಸ ಮಾಡಿತ್ತು. ಜೂನ್ 2020 ರಲ್ಲಿ ಚೀನಾಕ್ಕೆ ಪ್ರಧಾನಿ ಮೋದಿಯವರ ಕ್ಲೀನ್ ಚಿಟ್ ಮತ್ತು ಚೀನಾದ ಕ್ರಮಗಳ ಬಗ್ಗೆ ಅವರ ನಿರ್ಗಳ ಮೌನಕ್ಕಾಗಿ ನಾವು ಪಾವತಿಸುತ್ತಿರುವ ಬೆಲೆ ಇದು" ಎಂದು ಜೈರಾಮ್ ರಮೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ನ್ಯಾಯದಾನ: ಕರ್ನಾಟಕ ನಂ.1



ನವದೆಹಲಿ: ನ್ಯಾಯದಾನದಲ್ಲಿ ಕರ್ನಾಟಕ ಅಗ್ರ ಸ್ಥಾನಕ್ಕೇರಿದ್ದು 2022 ರ ಭಾರತೀಯ ನ್ಯಾಯಾಂಗ ವರದಿ (ಐಜೆಆರ್) ನ ಪಟ್ಟಿಯಲ್ಲಿ ಅಗ್ರ ಸ್ಥಾನಕ್ಕೇರಿದೆ. ಒಂದು ಕೋಟಿಗೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ 18 ದೊಡ್ಡ ಹಾಗೂ ಮಧ್ಯಮ ಗಾತ್ರದ ರಾಜ್ಯಗಳ ಪೈಕಿ ಕರ್ನಾಟಕ ಅಗ್ರಸ್ಥಾನದಲ್ಲಿದ್ದರೆ, ತಮಿಳುನಾಡು ಎರಡನೇ ಸ್ಥಾನ ಹಾಗೂ ತೆಲಂಗಾಣ 3 ನೇ ಸ್ಥಾನದಲ್ಲಿದೆ.

ಪೊಲೀಸ್, ನ್ಯಾಯಾಂಗ, ಕಾರಾಗೃಹಗಳು ಮತ್ತು ಕಾನೂನು ನೆರವುಗಳೇ ಮುಂತಾದ ನ್ಯಾಯದಾನದ ಪ್ರಕ್ರಿಯೆಯಲ್ಲಿ ಉತ್ತರ ಪ್ರದೇಶ 18 ನೇ ಸ್ಥಾನದಲ್ಲಿದೆ. ಪೊಲೀಸ್, ನ್ಯಾಯಾಂಗ, ಕಾರಾಗೃಹಗಳು ಮತ್ತು ಕಾನೂನು ನೆರವುಗಳನ್ನು ಪರಿಗಣಿಸಿ ಈ ವರದಿಯನ್ನು ಪ್ರಕಟಿಸಲಾಗಿದೆ.

ಅಚ್ಚರಿಯೆಂದರೆ, ಗುಜರಾತ್ 4 ನೇ ಸ್ಥಾನದಲ್ಲಿದ್ದು ಆಂಧ್ರಪ್ರದೇಶ 5 ನೇ ಸ್ಥಾನದಲ್ಲಿದೆ. ವರದಿಯ ಪ್ರಕಾರ, 1 ಕೋಟಿಗೂ ಕಡಿಮೆ ಜನಸಂಖ್ಯೆ ಇರುವ 7 ಸಣ್ಣ ರಾಜ್ಯಗಳ ಪೈಕಿ ಸಿಕ್ಕೀಮ್ ಮೊದಲ ಸ್ಥಾನ ಪಡೆದಿದೆ. 2020 ರಲ್ಲಿ ಸಿಕ್ಕೀಮ್ 2 ನೇ ಸ್ಥಾನದಲ್ಲಿತ್ತು. 2020 ರಲ್ಲಿ 5 ನೇ ಸ್ಥಾನದಲ್ಲಿದ್ದ ಅರುಣಾಚಲ ಪ್ರದೇಶ ಈ ಬಾರಿ ಸಿಕ್ಕೀಮ್ ನಂತರದ ಸ್ಥಾನದಲ್ಲಿದ್ದರೆ.

2020 ರಲ್ಲಿ ಮೊದಲ ಸ್ಥಾನದಲ್ಲಿದ್ದ ತ್ರಿಪುರಾ ಈಗ ಮೂರನೇ ಸ್ಥಾನಕ್ಕೆ ಕುಸಿದಿದ್ದು, ಕೊನೆಯ ಸ್ಥಾನದಲ್ಲಿ ಗೋವಾ ಇದೆ.

2019 ರಲ್ಲಿ ಟಾಟಾ ಟ್ರಸ್ಟ್ ಐಜೆಆರ್ ನ್ನು ಪ್ರಾರಂಭಿಸಿತ್ತು. ಈ ವರ್ಷ ಪ್ರಕಟವಾಗಿರುವುದು 3 ನೇ ಆವೃತ್ತಿಯಾಗಿದೆ.

## 1 ಕೋಟಿ 47 ಲಕ್ಷ ಮೌಲ್ಯದ ಚಿನ್ನ ಲೇಪನದ ಆಭರಣಗಳು ವಶ

ಹಲಸೂರು: ಚುನಾವಣೆ ಹೊತ್ತಲ್ಲಿ ಹಣ, ಚಿನ್ನ, ಮದ್ಯ, ಸೀರೆ, ಕುಕ್ಕರ್ ಸದ್ದೇ ಜಾಸ್ತಿಯಾಗಿ ಕೇಳಿಬರುತ್ತಿದೆ. ಅದರೊಂದಿಗೆ ಇದೀಗ ಗೋಲ್ಡ್ ಕೋಟೆಡ್ ಆಭರಣಗಳ ಸದ್ದು ಕೇಳಿಬಂದಿದೆ. ಹಲಸೂರು ಪೊಲೀಸರು ಭರ್ಜರಿ ಕಾರ್ಯಚರಣೆ ನಡೆಸಿ ಸುಮಾರು 1 ಕೋಟಿ 47 ಲಕ್ಷದಷ್ಟು ಮೌಲ್ಯದ ಗೋಲ್ಡ್ ಕೋಟೆಡ್ ಆಭರಣವನ್ನು ಸೀಜ್ ಮಾಡಿದ್ದಾರೆ.

ಮತದಾರರಿಗೆ ಹಂಚಲು ತೆಗೆದುಕೊಂಡು ಹೋಗುತ್ತಿದ್ದ ಗೋಲ್ಡ್ ಕೋಟೆಡ್ ಆಭರಣಗಳು ಪೊಲೀಸರ ಕೈಗೆ ಸಿಕ್ಕಿದೆ. ಮೂವರು ಆರೋಪಿಗಳು ಇದನ್ನು ತೆಗೆದುಕೊಂಡು ಹೋಗುತ್ತಿರುವಾಗ ಕಾರ್ಯಚರಣೆ ನಡೆಸಿ ಪೊಲೀಸರು ಅವರನ್ನು ಬಂಧಿಸಿದ್ದಾರೆ.



ಪಂಕಜ್ ಗೌಡ, ಭಗವಾನ್ ಸಿಂಗ್, ವಡಿವೇಲು ಎಂಬವರನ್ನು ಹಲಸೂರು ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 8.50ಗ್ರಾಂ ತೂಕದ ಗೋಲ್ಡ್ ಕೋಟೆಡ್ ಸರ, ಉಂಗುರ, ಕಿವಿ ಓಲೆ, ಬ್ರೇಸ್ ಲೇಟ್, ಬಳೆಗಳು ವಶಕ್ಕೆ ಪಡೆದುಕೊಂಡಿದ್ದಾರೆ. ಮಾಹಿತಿ ಯಂತೆಯೇ, ಆಭರಣಗಳನ್ನು ಸಿವಿ ರಾಮನ್ ನಗರ ವಿಧಾನಸಭಾ ಕ್ಷೇತ್ರದಲ್ಲಿ ಹಂಚಲು ತರಲಾಗಿತ್ತು ಎಂದು ತಿಳಿದುಬಂದಿದೆ.

ಚುನಾವಣಾಧಿಕಾರಿ ಮುನಿಯನಾಯಕ ನೀಡಿದ್ದ ದೂರಿನ ಮೇರೆಗೆ ದಾಳಿ ನಡೆಸಿ ಮೂವರನ್ನು ಬಂಧಿಸಲಾಗಿದೆ. ದೂರಿನ ಮೇರೆಗೆ ನಿನ್ನೆ ಸಂಜೆ ದಾಳಿ ನಡೆಸಿದ್ದ ಅಧಿಕಾರಿಗಳು ಮೂವರನ್ನು ಬಂಧಿಸಿದ್ದಾರೆ. ಎಸಿಪಿ ರಾಮಚಂದ್ರ,ಇನ್ಸ್‌ಪೆಕ್ಟರ್ ಹರೀಶ್ ಬಾಬು, ಸಬ್ ಇನ್ಸ್‌ಪೆಕ್ಟರ್ ಮಧು ಅವರಿಂದ ಕಾರ್ಯಾಚರಣೆ ನಡೆಸಿದ್ದಾರೆ. ಸದ್ಯ ಪೊಲೀಸರು ಆರೋಪಿಗಳ ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.

## ಅಕ್ರಮವಾಗಿ ಸಾಗಿಸುತ್ತಿದ್ದ 1.20ಲಕ್ಷ ರೂ. ಜಪ್ತಿ

ತುಮಕೂರು: ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ರ ಸಂಬಂಧ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಚೆಕ್ಪೋಸ್ಟ್'ಗಳನ್ನು ನಿರ್ಮಿಸಲಾಗಿದ್ದು, ವ್ಯಕ್ತಿಯೊಬ್ಬರಿಂದ 1.20 ಲಕ್ಷ ರೂ.ಗಳನ್ನು ವಶಕ್ಕೆ ಪಡೆಯಲಾಗಿದೆ.

ಚೆಕ್ ಪೋಸ್ಟ್'ಗಳಲ್ಲಿ ಎಫ್.ಎಸ್.ಟಿ.ಮತ್ತು ಎಸ್‌ಎಸ್ಟಿ ತಂಡಗಳು ಕಾರ್ಯ ನಿರ್ವಹಿಸುತ್ತಿದ್ದು, ಸೋಮವಾರ ಕೊರಟಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಜೋನಿಗರಹಳ್ಳಿ ಕ್ರಾಸ್ ಚೆಕ್ಪೋಸ್ಟ್'ನಲ್ಲಿ ವ್ಯಕ್ತಿ ಸಹಿತ ಹಣವನ್ನು ವಶಕ್ಕೆ ಪಡೆಯಲಾಗಿದೆ.

ತೋವಿನಕೆರೆ ಕಡೆಯಿಂದ ಕೆಎ–06–ಈವಿ–821 ಸಿ.ಡಿ. ಡಿಲಕ್ಸ್ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಮುನಿಸ್ವಾಮಿ ಬಿನ್ ಕಾಟಯ್ಯ ಎಂಬುವರನ್ನು ನಿಲ್ಲಿಸಿ ತಪಾಸಣೆ ನಡೆಸಲಾಗಿದ್ದು, 1.20 ಲಕ್ಷ ರೂ. ಹಣ ಪತ್ತೆಯಾಗಿದೆ. ಈ ಹಣದ ಕುರಿತು ಸದರಿ ವ್ಯಕ್ತಿ ಸಮಂಜಸವಾದ ಉತ್ತರವನ್ನು ನೀಡದೆ ಇರುವುದರಿಂದ ಎಸ್‌ಎಸ್ಟಿ ತಂಡದ ಸದಸ್ಯರು ಸದರಿ ವ್ಯಕ್ತಿಯನ್ನು ಹಾಗೂ ಹಣವನ್ನು ವಶಕ್ಕೆ ಪಡೆದು ಎಫ್‌ಐಆರ್ ಸಂಖ್ಯೆ ಜಿಎಸ್ಸಿ ನಂ.131/2023ರ ರೀತ್ಯಾ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಕೆ. ವಿದ್ಯಾಕುಮಾರಿ ತಿಳಿಸಿದ್ದಾರೆ.



## ಒಳ ಮೀಸಲಾತಿಗೆ ವಿರೋಧ: ಸಿಎಂ ಬೊಮ್ಮಾಯಿ ಕ್ಷೇತ್ರದಲ್ಲೇ ಬಂಜಾರ ಸ್ವಾಮೀಜಿ ಆತ್ಮಹತ್ಯೆಗೆ ಯತ್ನ



ಹಾವೇರಿ: ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಒಳಮೀಸಲಾತಿ ವಿರೋಧಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ಷೇತ್ರದಲ್ಲಿ ಬಂಜಾರ ಸಮುದಾಯದ ಪ್ರತಿಭಟನೆ ವೇಳೆ ಸ್ವಾಮೀಜಿಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ.

ಸರ್ಕಾರದ ನಡೆಯನ್ನು ಖಂಡಿಸಿ ತಹಶೀಲ್ದಾರ್ ಕಚೇರಿ ಬಳಿ ಬಂಜಾರ ಸಮುದಾಯದ ಸ್ವಾಮೀಜಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಸಿದ್ದಾರೆ.

ತಕ್ಷಣ ಅಲ್ಲಿದ್ದ ಜನ ಅವರನ್ನು ರಕ್ಷಿಸಿದ್ದಾರೆ. ಸ್ವಾಮೀಜಿಯವರನ್ನು ಗುಂಡೂರು ಗ್ರಾಮದ ತಿಪ್ಪೆಸ್ವಾಮಿ ಎಂದು ಗುರುತಿಸಲಾಗಿದೆ. ಶಿಗ್ಗಾಂವ್ ತಾಲೂಕು ಆಸ್ಪತ್ರೆಯಲ್ಲಿ ಸ್ವಾಮಿಜಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಸ್ವಾಮೀಜಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

## 2022–23 ಹಣಕಾಸು ವರ್ಷ: ಬಿಬಿಎಂಪಿ ಆದಾಯ 3,332 ಕೋಟಿ ರೂ.




ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯ ಕಂದಾಯ ಇಲಾಖೆಯು ಆದಾಯವು 2022–2023ರ ಹಣಕಾಸು ವರ್ಷದಲ್ಲಿ 3,332 ಕೋಟಿ ರೂಪಾಯಿಗೆ ತಲುಪಿದೆ. ಕಳೆದ ಹಣಕಾಸು ವರ್ಷದಲ್ಲಿ 3,088 ಕೋಟಿ ರೂ. ಆದಾಯ ಸಂಗ್ರಹವಾಗಿತ್ತು.

ಬಿಬಿಎಂಪಿ ಕಂದಾಯ ಆಯುಕ್ತ ಆರ್. ಎಲ್.ದೀಪಕ್ ಮಾತನಾಡಿ, ಪಾಲಿಕೆಯು ಆರ್ಥಿಕ ವರ್ಷದಲ್ಲಿ ಆಸ್ತಿ ತೆರಿಗೆ ಸಂಗ್ರಹದ ಮೂಲಕ 4,000 ಕೋಟಿ ರೂ.ಗೂ ಹೆಚ್ಚು ಆದಾಯ ಸಂಗ್ರಹಿಸುವ ಗುರಿ ಹೊಂದಿರುವುದರಿಂದ ಬಿಬಿಎಂಪಿ ಆಸ್ತಿ ಸಂಗ್ರಹಣೆಯಲ್ಲಿ ಪ್ರಗತಿ ಕಂಡುಬಂದಿದೆ ಎಂದು ತಿಳಿಸಿದ್ದಾರೆ.

ಬೆಸ್ಕಾಂ ಮೀಟರ್ ರೀಡಿಂಗ್‌ಗಳನ್ನು ಪರಿಶೀಲಿಸುವುದು ಮತ್ತು ಆಸ್ತಿ ಮಾಲೀಕರಿಂದ ಸ್ವಯಂ–ಮೌಲ್ಯಮಾಪನ ತೆರಿಗೆ ವರದಿಗಳನ್ನು ಪರಿಶೀಲಿಸುವುದು ಸೇರಿದಂತೆ ಇತರೆ ಉಪಕ್ರಮಗಳ ಮೂಲಕ ಹೆಚ್ಚಿನ ಆದಾಯ ಸಂಗ್ರಹಿಸಲು ಸಾಧ್ಯ ಎಂದು ಅವರು ಹೇಳಿದ್ದಾರೆ.

ಪಾಲಿಕೆಯ ತೆರಿಗೆ ಸಂಗ್ರಹವು 2022–2023ರಲ್ಲಿ ಶೇಕಡ 75.13 ರಷ್ಟು ಇದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 250 ಕೋಟಿ ರೂ.ಗೂ ಹೆಚ್ಚು ಆದಾಯ ಸಂಗ್ರಹವಾಗಿದೆ.

ಪಾಲಿಕೆಯು 2023–2024ರಲ್ಲಿ ಆಸ್ತಿ ತೆರಿಗೆಯನ್ನು ಮತ್ತಷ್ಟು ಹೆಚ್ಚು ಸಂಗ್ರಹಿಸಲು ಪ್ರಯತ್ನಿಸಲಿದೆ ಎಂದು ದೀಪಕ್ ತಿಳಿಸಿದ್ದಾರೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಿ ಸಂಸ್ಥೆಗಳಿಗೆ ಒಂದೇ ಕಂತಿನಲ್ಲಿ ಬಾಕಿ ಪಾವತಿಸಲು ಪಾಲಿಕೆಯು ಮಾರ್ಚ್ 27 ರಿಂದ ಆರು ತಿಂಗಳವರೆಗೆ ಅವಕಾಶ ನೀಡಿದೆ. ಈ ಉಪಕ್ರಮ ಉತ್ತಮವಾಗಿ ಕಾರ್ಯನಿರ್ವಹಿಸಿದರೆ, ಪಾಲಿಕೆಯು 2023–2024ರಲ್ಲಿ ಹೆಚ್ಚುವರಿಯಾಗಿ 300 ಕೋಟಿಯಿಂದ 700 ಕೋಟಿ ರೂಪಾಯಿ ಆದಾಯ ಸಂಗ್ರಹಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಅಪ್ರಾಪ್ತ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

### ಕೃತ್ಯದ ಬಳಿಕ ದುಪ್ಪಟಾದಿಂದ ಮರಕ್ಕೆ ನೇಣು ಬಿಗಿಯಲು ಯತ್ನ

ಪಾಟ್ನಾ: ಇಲ್ಲಿನ ಹಳ್ಳಿಯೊಂದರಲ್ಲಿ ಅಪ್ರಾಪ್ತ ಬಾಲಕಿ ಮೇಲೆ ನಾಲ್ವರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಂಗಳವಾರ ಇಲ್ಲಿ ತಿಳಿಸಿದ್ದಾರೆ.

ಅಪರಾಧ ಎಸಗಿದ ಬಳಿಕ ಆರೋಪಿಗಳು ಬಾಲಕಿಂ–ಯನ್ನು ದುಪಟ್ಟಾದಿಂದ ಮರಕ್ಕೆ ನೇಣು ಹಾಕಲು ಯತ್ನಿಸಿದ್ದು, ಆಕೆಯ ಕಿರುಚಾಟ ಕೇಳಿ ಸ್ಥಳಕ್ಕೆ ಧಾವಿಸಿದ ಗ್ರಾಮಸ್ಥರು ತಡೆದಿದ್ದಾರೆ. ನಂತರ ಆಕೆಯನ್ನು ಬದ್ಯೆಯಾ ಬ್ಲಾಕ್‌ನಲ್ಲಿರುವ ಆಸ್ಪತ್ರೆಗೆ ದಾಖಲಿಸಿದ್ದು, ಅಪಾಯದಿಂದ ಪಾರಾಗಿದ್ದಾಳೆ ಎಂದು ಹೇಳಲಾಗಿದೆ.

ಆರೋಪಿಗಳಲ್ಲಿ ಒಬ್ಬಾತ ಸಂತ್ರಸ್ತೆಗೆ ಸ್ನೇಹಿತನಾಗಿದ್ದನು. ಆತ ಬಾಲಕಿಯ ಮನೆಯಿಂದ ಆಕೆಯನ್ನು ಗ್ರಾಮದ ಹತ್ತಿರದ ತೋಟಕ್ಕೆ ಕರೆದೊಯ್ದಿದ್ದಾನೆ. ಅಲ್ಲಿ ಈಗಾಗಲೇ ಅವನ ಮೂವರು ಸ್ನೇಹಿತರು ಇದ್ದರು. ಬಳಿಕ, ಬಾಲಕಿಯ ಮೇಲೆ ಎಲ್ಲರೂ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.




ಮಂಗಳವಾರ ಮಧ್ಯರಾತ್ರಿ 12.30ರ ಸುಮಾರಿಗೆ ಘಟನೆ ಬಗ್ಗೆ ನಮಗೆ ತಿಳಿಯಿತು.

ನಮ್ಮ ತಂಡ ಕೂಡಲೇ ಆಸ್ಪತ್ರೆಗೆ ಧಾವಿಸಿದೆ. ಸಂತ್ರಸ್ತೆಯ ಹೇಳಿಕೆಯ ಆಧಾರದ ಮೇಲೆ ನಾವು ಮೂವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಪಚಮಹಲ ಪೊಲೀಸ್ ಠಾಣೆಯ ಎಎಸ್‌ಐ ಮತ್ತು ತನಿಖಾಧಿಕಾರಿ ಶಾರದಾ ನನದ್ ರೈ ಹೇಳಿದ್ದಾರೆ.

ನಾಲ್ವರು ತನ್ನ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಸಂತ್ರಸ್ತೆ ಹೇಳಿದ್ದು, ಆಕೆಯ ಸ್ಥಿತಿ ಸ್ಥಿರವಾಗಿರುವುದರಿಂದ ವೈದ್ಯಕೀಯ ಪರೀಕ್ಷೆಗಾಗಿ ಬಾರ್ಹ್‌ನಲ್ಲಿರುವ ಉಪವಿಭಾಗೀಯ ಆಸ್ಪತ್ರೆಗೆ ಕಳುಹಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ರೈ ತಿಳಿಸಿದ್ದಾರೆ.

ಆರೋಪಿಗಳಲ್ಲಿ ಒಬ್ಬ ಪರಾರಿಯಾಗಿದ್ದಾನೆ. ಆತನನ್ನು ಹಿಡಿಯುವ ಪ್ರಯತ್ನ ನಡೆಯುತ್ತಿದೆ ಎಂದು ಅವರು ಹೇಳಿದರು.

## 2024ರ ಭಾರತದ ಆರ್ಥಿಕ ಬೆಳವಣಿಗೆ 6.3% ಕ್ಕೆ ಕಡಿತಗೊಳಿಸಿದ ವಿಶ್ವಬ್ಯಾಂಕ್




ನವದೆಹಲಿ: 2024ರ ವಿತ್ತೀಯ ವರ್ಷದ ಭಾರತದ ಆರ್ಥಿಕ ಬೆಳವಣಿಗೆಯನ್ನು ವಿಶ್ವ ಬ್ಯಾಂಕ್ ಶೇ.6.6ರಿಂದ ಶೇ.6.3ಕ್ಕೆ ಕಡಿತಗೊಳಿಸಿದೆ.

ಭಾರತದ ಆರ್ಥಿಕ ಬೆಳವಣಿಗೆಯ ಕುರಿತ ಮುನ್ಸೂಚನೆ ವರದಿ ಬಿಡುಗಡೆ ಮಾಡಿದ ವಿಶ್ವಬ್ಯಾಂಕ್, ಆರ್ಥಿಕ ಬೆಳವಣಿಗೆಯನ್ನು 6.3% ಕ್ಕೆ ಕಡಿತಗೊಳಿಸಿದೆ. ಈ ಹಿಂದೆ ಈ ಅಂದಾಜನ್ನು ವಿಶ್ವಬ್ಯಾಂಕ್ ಶೇ.6.6ರಷ್ಟು ಅಂದಾಜಿಸಿತ್ತು. ಇದೀಗ ನೂತನ ಪರಿಷ್ಕರಣೆಯಲ್ಲಿ ಶೇ.0.3ರಷ್ಟು ಕಡಿತಗೊಳಿಸಿದೆ. ವಿತ್ತೀಯ ವರ್ಷ 2024 ರಲ್ಲಿ ಬಳಕೆಯಲ್ಲಿನ ಮಿತವ್ಯಯದಿಂದಾಗಿ ಭಾರತದ ಉಆಕ ಈ ಹಿಂದಿನ ಶೇ.6.6ರ ಅಂದಾಜಿಗೆ ಹೋಲಿಸಿದರೆ 6.3 ಶೇಕಡಾಕ್ಕೆ ಮಧ್ಯಮವಾಗಬಹುದೆಂದು ನಿರೀಕ್ಷಿಸಲಾಗಿದೆ ಎಂದು ವಿಶ್ವ ಬ್ಯಾಂಕ್ ಮಂಗಳವಾರ ವರದಿಯಲ್ಲಿ ತಿಳಿಸಿದೆ. ನಿಧಾನಗತಿಯ ಬಳಕೆಯ ಬೆಳವಣಿಗೆ ಮತ್ತು ಸವಾಲಿನ ಬಾಹ್ಯ ಪರಿಸ್ಥಿತಿಗಳಿಂದ ಬೆಳವಣಿಗೆಯನ್ನು ನಿರ್ಬಂಧಿಸುವ ಸಾಧ್ಯತೆಯಿದೆ ಎಂದು ವಿಶ್ವ ಬ್ಯಾಂಕ್ ತನ್ನ ಇಂಡಿಂ–ಯಾ ಡೆವಲಪ್‌ಮೆಂಟ್ ಅಪ್‌ಡೇಟ್‌ನಲ್ಲಿ ಹೇಳಿದೆ. "ಏರುತ್ತಿರುವ ಎರವಲು ವೆಚ್ಚಗಳು ಮತ್ತು ನಿಧಾನವಾದ ಆದಾಯದ ಬೆಳವಣಿಗೆಯು ಖಾಸಗಿ ಬಳಕೆಯ ಬೆಳವಣಿಗೆಯ ಮೇಲೆ ತೂಗುತ್ತದೆ ಮತ್ತು ಸಾಂಕ್ರಾಮಿಕ–ಸಂಬಂಧಿತ ಹಣಕಾಸಿನ ಬೆಂಬಲ ಕ್ರಮಗಳನ್ನು ಹಿಂತೆಗೆದುಕೊಳ್ಳುವುದರಿಂದ ಸರ್ಕಾರದ ಬಳಕೆ ನಿಧಾನಗತಿಯಲ್ಲಿ ಬೆಳೆಯುವ ನಿರೀಕ್ಷೆಯಿದೆ" ಎಂದು ಅದು ಹೇಳಿದೆ. ವರದಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ 3 ಪ್ರತಿಶತಕ್ಕೆ ಹೋಲಿಸಿದರೆ, FY24 ರಲ್ಲಿ ಚಾಲ್ತಿ ಖಾತೆ ಕೊರತೆಯನ್ನು ಶೇಕಡಾ 2.1 ಕ್ಕೆ ಮಧ್ಯಮವಾಗಿಸುತ್ತದೆ. ಹಣದುಬ್ಬರಕ್ಕೆ ಸಂಬಂಧಿಸಿದಂತೆ, ವಿಶ್ವಬ್ಯಾಂಕ್ ವರದಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ 6.6 ಪ್ರತಿಶತದ ವಿರುದ್ಧ 5.2 ಪ್ರತಿಶತಕ್ಕೆ ತಗ್ಗಿಸುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

## ಮತದಾರರಿಗೆ ನೀಡಿದ ಕುಕ್ಕರ್ ಬ್ಲಾಸ್ಟ್

### ತಾಯಿ–ಮಗು ಪ್ರಾಣಾಪಾಯದಿಂದ ಪಾರು



ಚಿಕ್ಕಮಗಳೂರು : ಶಾಸಕರೊಬ್ಬರ ಬೆಂಬಲಿಗರು ನೀಡಿರುವ ಕುಕ್ಕರ್ ಸ್ಫೋಟಗೊಂಡ ಘಟನೆ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಶಾನುವಳ್ಳಿಯಲ್ಲಿ ನಡೆದಿದ್ದು, ಮಹಿಳೆ ಅಪಾಯದಿಂದ ಪಾರಾಗಿದ್ದಾರೆ.

ಕಳೆದ ತಿಂಗಳು ಶಾಸಕರ ಬೆಂಬಲಿಗರು ಮತದಾರರಿಗೆ ಕುಕ್ಕರ್ ಹಂಚಿದ್ದರು ಎನ್ನಲಾಗಿದೆ. ಅದೇ ಕುಕ್ಕರ್ ಮನೆಯಲ್ಲಿ ಸ್ಫೋಟಗೊಂಡಿದ್ದು, ಘಟನೆ ವೇಳೆ ತಾಯಿ ಮತ್ತು ಮಗು ಹೊರಗಡೆ ಇದ್ದಿದ್ದರಿಂದ ಅನಾಹುತ ತಪ್ಪಿದೆ.

ಇನ್ನೊಂದೆಡೆ ಕಳಪೆ ಕುಕ್ಕರ್ ಕೊಟ್ಟು ಜೀವದ ಜೊತೆ ಆಟವಾಡ್ತಿದ್ದಾರೆ ಅಂತಾ ಸ್ಥಳೀಯರು ದೂರಿದ್ದಾರೆ.

ಅಲ್ಲದೇ 450 ರೂಪಾಯಿ ಕುಕ್ಕರ್ನ್ಗೆ 1,399 ರೂ. ಅಂತಾ ಲೇಬಲ್ ಅಂಟಿಸಿ, ಮತದಾರರಿಗೆ ಹಂಚಲಾಗಿತ್ತು ಎಂದು ಆರೋಪಿಸಲಾಗುತ್ತಿದೆ.

ಕಳಪೆ ಕುಕ್ಕರ್ ನೀಡಿ ಜನರ ಜೀವದ ಜೊತೆ ಚಲ್ಲಾಟ ಆಡ್ತಿದ್ದಾರೆಂದು ಜನ ಕಿಡಿಕಾರಿದ್ದಾರೆ.

## ಮಲ್ಯಾಡಿ ಪಕ್ಷಿಧಾಮದಲ್ಲಿ ಭಾರತೀಯ ನೀರುನಾಯಿ ಪತ್ತೆ

ಉಡುಪಿ: ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮಲ್ಯಾಡಿ ಪಕ್ಷಿಧಾಮದ ಜೌಗು ಪ್ರದೇಶದಲ್ಲಿ ಭಾರತೀಯ ನೀರು ನಾಯಿಯೊಂದು ಕಾಣಿಸಿ ಕೊಂಡಿರುವುದು ಪರಿಸರ ಪ್ರೇಮಿಗಳು ಹಾಗೂ ಸಾರ್ವಜನಿಕರಲ್ಲಿ ಸಂತಸ ಮೂಡಿಸಿದೆ.

ಸ್ಥಳೀಯವಾಗಿ 'ನೀರು ನಾಯಿ' ಎಂದು ಕರೆಯುವ ಇಂಡಿಯನ್ ಒಟ್ಟರ್ ಪ್ರಾಣಿಗಳು ಇತ್ತೀಚಿನ ತಿಂಗಳುಗಳಲ್ಲಿ ಅಭಯಾರಣ್ಯದಲ್ಲಿ ಕಾಣಿಸಿಕೊಂಡಿವೆ. ಈ ಹಿಂದೆ ಈ ಅಭಯಾರಣ್ಯವು ಈಗ್ರೆಟ್ಸ್ (ಬೆಳ್ಳಕ್ಕಿ), ಕ್ರೆಸ್ಟೆಡ್ ಲಾರ್ಕ್ಸ್, ಲಿಟಲ್ ಕಾರ್ಮೊರೆಂಟ್ಸ್ (ನೀರುಕಾಗೆ), ಸ್ಪಾಟ್–ಬಿಲ್ಡ್ ಡಕ್ (ವರಟೆ ಅಥವಾ ಬಾತುಕೋಳಿ), ಕಾಮನ್ ಕೂಟ್, ಬಾಚಣಿಗೆ ಬಾತುಕೋಳಿ ಮತ್ತು ಯುರೇಷಿಯನ್ ಟೀಲ್ ಮುಂತಾದ ವಿವಿಧ ಜಾತಿಯ ಪಕ್ಷಿಗಳ ಆಗಮನಕ್ಕೆ ಸಾಕ್ಷಿಯಾಗಿ–ತ್ತು.

ಆದಾಗ್ಯೂ, ನೀರುನಾಯಿಗಳು ಪಕ್ಷಿಗಳಿಗೆ ಅಪಾಯವನ್ನುಂಟುಮಾಡುತ್ತವೆಯೇ ಎಂಬ ಶಂಕೆ ಇದ್ದು, ನೀರುನಾಯಿಗಳು ಮೀನುಗಳನ್ನು ಮಾತ್ರ ತಿನ್ನುತ್ತವೆ ಮತ್ತು ಪಕ್ಷಿಗಳಿಗೆ ಯಾವುದೇ ಹಾನಿ ಮಾಡುವುದಿಲ್ಲ ಎಂದು ನಿವಾಸಿಗಳು ಭರವಸೆ ನೀಡಿದ್ದಾರೆ. ಅದಾಗ್ಯೂ 1.5 ಚದರ ಕಿಲೋಮೀಟರ್‌ನಲ್ಲಿ ಹರಡಿರುವ ನಿರ್ವಹಣೆ ಕೈಬಿಟ್ಟ ಮಣ್ಣಿನ ಕ್ವಾ–ರಿಯಾಗಿರುವ ಪಕ್ಷಿಧಾಮಕ್ಕೆ ಅವು ಅಡ್ಡಿಪಡಿಸಿದರೆ ತಜ್ಞರು ಅಧ್ಯಯನ ಮಾಡಬೇಕಾಗಬಹುದು.



ಪಕ್ಷಿ ವೀಕ್ಷಕರಿಗೆ ಅಥ–'ವಾ ಕುತೂಹಲಕಾರಿ ಪ್ರವಾಸಿಗರಿಗೆ, ಮಲ್ಯಾಡಿ ಪಕ್ಷಿಧಾಮವು ತೆಕ್ಕಟ್ಟೆಯಿಂದ (ಓಊ 66) ಕೇವಲ ಐದು ನಿಮಿಷಗಳ ದೂರ ಪ್ರಯಾಣದ ಅಂತರದಲ್ಲಿದೆ. ಸೆಪ್ಟೆಂಬರ್ ಮತ್ತು ಜನವ–ರಿಯ ನಡುವಿನ ಮುಂಜಾನೆಯ ಭೇಟಿಯು (ಸಂತಾನೋತ್ಪತ್ತಿ ಅವಧಿ) ಕಣ್ಣುಗಳಿಗೆ ಹಬ್ಬವನ್ನು ನೀಡುತ್ತದೆ, ಪಕ್ಷಿಗಳು ಮೀನುಗಳನ್ನು ಹಿಡಿಯಲು ಕೆಳಗೆ ಹಾರುತ್ತವೆ.

ಆನಗಳ್ಳಿ, ವಂಡ್ಸೆ, ಹೆಮ್ಮಾಡಿ ಸೇರಿದಂತೆ ಇತರೆಡೆ ಸೌಪರ್ಣಿಕಾ ನದಿಯ ಹಿನ್ನೀರಿನಲ್ಲಿ ಈ ಹಿಂದೆ 8–10 ಗುಂಪುಗಳಲ್ಲಿ ಭಾರತೀಯ ನೀರುನಾಯಿಗಳು ಕಾಣಿಸಿಕೊಂಡಿದ್ದವು ಎಂದು ಆರು ತಿಂಗಳ ಹಿಂದೆ ಕುಂದಾಪುರದಲ್ಲಿ ಕೆಲಸ ಮಾಡುತ್ತಿದ್ದ ರೇಂಜ್ ಫಾರೆಸ್ಟ್ ಆಫೀಸರ್ ಪ್ರಭಾಕರ ಕುಲಾಲ್ ಖಿಔಖಇ ಗೆ ತಿಳಿಸಿದರು.

ಬೈಂದೂರು ಮತ್ತು ಕುಂದಾಪುರ ತಾಲೂಕಿನಲ್ಲಿ ಒಟ್ಟು 40 ರಿಂದ 50 ಭಾರತೀಯ ನೀರುನಾಯಿಗಳು ಇವೆ... ಆದ–'ರೆ ಅವು ಉಡುಪಿ ಜಿಲ್ಲೆಯ ಬೇರೆ ಯಾವುದೇ ಭಾಗಗಳಲ್ಲಿ ಕಂಡುಬಂದಿಲ್ಲ. ಭಾರತೀಯ ನೀರುನಾಯಿಗಳನ್ನು ವನ್ಯಜೀವಿ (ರಕ್ಷಣೆ) ಕಾಯಿದೆ, 1972 ರ ಅಡಿಯಲ್ಲಿ ರಕ್ಷಿಸಲಾಗಿದೆ," ಎಂದು ಅವರು ಹೇಳಿದರು.

2021ರಲ್ಲಿ ಕುಂದಾಪುರ ತಾಲೂಕಿನಲ್ಲಿ ಮೊಟ್ಟಮೊದಲ ಬಾರಿಗೆ ಭಾರತೀಯ ನೀರುನಾಯಿ ಕಾಣಿಸಿಕೊಂಡಿದ್ದು, ಕಳೆದ ವರ್ಷ ಕೊಲ್ಲೂರಿನ ಅನೇಜಾರಿ ಬಳಿ ಹಾಗೂ ಹಳ್ನಾಡು ಗ್ರಾಮದ ವಾರಾಹಿ ನದಿಯಲ್ಲಿ ಕಾಣಿಸಿಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.

## ನೀತಿ ಸಂಹಿತೆ ಉಲ್ಲಂಘನೆ: 51 ಪ್ರಕರಣ ದಾಖಲು

# 16.59 ಲಕ್ಷ ನಗದು ವಶಕ್ಕೆ: ಡಿಸಿ ಮಾಲಪಾಟಿ

ಬಳ್ಳಾರಿ: ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ನೀತಿ ಸಂಹಿತೆ ಜಾರಿಯಲ್ಲಿದ್ದು, ಜಿಲ್ಲೆಯಾದ್ಯಂತ ಕಟ್ಟುನಿಟ್ಟಿನ ಚೆಕ್‌ಪೋಸ್ಟ್ ವ್ಯವಸ್ಥೆ ಮಾಡಲಾಗಿದೆ. ನೀತಿ ಸಂಹಿತೆ ಉಲ್ಲಂಘಿಸಿ ಸಾಗಿಸುತ್ತಿದ್ದ ನಗದು ಸೇರಿದಂತೆ ಚಿನ್ನಾಭರಣ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ಜಿಲ್ಲಾ ಚುನಾವಣಾಧಿಕಾರಿ ಪವನ್ ಕುಮಾರ್ ಮಾಲಪಾಟಿ ಅವರು ಮಾಹಿತಿ ನೀಡಿದ್ದಾರೆ. ಜಿಲ್ಲೆಯಾದ್ಯಂತ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ದಾಖಲೆ ಇಲ್ಲದೇ ಸಾಗಿಸುತ್ತಿದ್ದ ನಗದು, ಚಿನ್ನಾಭರಣ ಸೇ–ರಿದಂತೆ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು



ತಿಳಿಸಿದ್ದಾರೆ.

ಸೋಮವಾರ ಸಂಜೆ ರೂಪನಗುಡಿ ಚೆಕ್‌ಪೋಸ್ಟ್ ಬಳಿ ತಪಾಸಣೆ ನಡೆಸುವ ವೇಳೆ ಆಂಧ್ರ ಪ್ರದೇಶ ಪರವಾನಿಗೆ ಹೊಂದಿದ ವಾಹನದಲ್ಲಿ 4.8 ಕೆಜಿ ಬೆಳ್ಳಿ ಅಂ–ದಾಜು ಮೌಲ್ಯ 1.21 ಲಕ್ಷ, 405 ಗ್ರಾಂ ಚಿನ್ನ ಅಂದಾಜು ಮೌಲ್ಯ 23.92 ಲಕ್ಷ ರೂ. ಹಾಗೂ 24.5 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ಆರೋಪಿತನ ಮೇಲೆ ಬ್ರೂಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪವನ್ ಕುಮಾರ್ ಮಾಲಪಾಟಿ ತಿಳಿಸಿದ್ದಾರೆ.

*51 ಪ್ರಕರಣ, 16.59 ಲಕ್ಷ ರೂ. ನಗದು ವಶಕ್ಕೆ:*ಅಬಕಾರಿ ಇಲಾಖೆಯಿಂದ 45 ಪ್ರಕರಣ ಹಾಗೂ ಫ್ಲೈಯಿಂಗ್ ಸ್ಕ್ವಾಡ್(–ಎಫ್‌ಎಸ್)3, ಸ್ಟಾಟಿ–ಕ್ ಸರ್ವೈವ್‌ಲೆನ್ಸ್ ಟೀಮ್(–ಎಸ್‌ಎಸ್‌ಟಿ) 2 ಹಾಗೂ ಪೊಲೀಸ್ ಇಲಾಖೆ 1 ಸೇ–ರಿದಂತೆ ಒಟ್ಟು 51ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.

*ನೀತಿ ಸಂಹಿತೆ ಕಟ್ಟುನಿಟ್ಟಿನ ಜಾರಿಗೆ ತಂಡಗಳು ಕಾರ್ಯ ಪ್ರವೃತ್ತ:*ಜಿಲ್ಲೆಯಾದ್ಯಂತ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಜಾ–ರಿಗೊಳಿಸಲು ವಿವಿಧ ತಂಡಗಳನ್ನು ರಚಿಸಲಾಗಿದ್ದು, ಈಗಾಗಲೇ ಕಾರ್ಯಪ್ರವೃತ್ತವಾಗಿದೆ.

ಒಟ್ಟು 43 ಫ್ಲೈಯಿಂಗ್ ಸ್ಕ್ವಾಡ್, 27 ಎಸ್‌ಎಸ್‌ಟಿ ತಂಡ ಹಾಗೂ 7 ಅಬಕಾರಿ ತಂಡ ಕೆಲಸ ನಿರ್ವಹಿಸುತ್ತಿವೆ. ಚುನಾವಣೆ ಕರ್ತವ್ಯದಲ್ಲಿ ಇಲ್ಲಿಯವರೆಗೆ ಜಿಲ್ಲೆಯಾದ್ಯಂತ ತಂಡದಿಂದ 6 ಲಕ್ಷ ರೂ., ಎಸ್‌ಎಸ್‌ಟಿ ತಂಡದಿಂದ 10.35 ಲಕ್ಷ ರೂ. ಹಾಗೂ ಪೊಲೀಸ್ ಇಲಾಖೆಯಿಂದ 24.5 ಸಾವಿರ ರೂ. ಸೇರಿದಂತೆ ಒಟ್ಟು 16.59 ಲಕ್ಷ ರೂ. ನಗದು ವಶಪಡಿಸಿಕೊಳ್ಳಲಾಗಿದೆ. 312 ಲೀ. ಮದ್ಯ, 710 ಗ್ರಾಂ ಡ್ರಗ್ಸ್, ಮತದಾರರಿಗೆ ಆಮಿಷವೊಡ್ಡುವ 82 ವಿವಿಧ ಸರಕುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

## ರಾಜ್ಯದಲ್ಲಿ ಜಾತಿ,ಮತಗಳ ಭೇದಭಾವವಿಲ್ಲದೆ ಸಮಗ್ರ ಅಭಿವೃದ್ಧಿಗೆ ಜೆಡಿಎಸ್ ಮಾತ್ರ ಆಶಾಕಿರಣವಾಗಿದೆ: ರಾಜುನಾಯಕ



ಬಳ್ಳಾರಿ: ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಕಂಪ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ರಾಜುನಾಯಕ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ರಾಜ್ಯದಲ್ಲಿ ಜಾತಿ, ಮತ, ಪಂಥ,ಧರ್ಮಗಳ ಭೇದಭಾವವಿಲ್ಲದೆ ಸಮಗ್ರವಾದ ಅಭಿವೃದ್ಧಿಗೆ ಜೆಡಿಎಸ್ ಮಾತ್ರ ರಾಜ್ಯದ ಜನತೆಗೆ ಆಶಾಕಿರಣವಾಗಿದೆ ಎಂದು ಕಂಪ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿರುವ ರಾಜು ನಾಯಕ ಅಭಿಪ್ರಾಯಪಟ್ಟರು.

ಜೆಡಿಎಸ್ ಜಿಲ್ಲಾ ಗೌರವಾಧ್ಯಕ್ಷ ಕೆ.ಎಂ. ಹೇಮಯ್ಯಸ್ವಾಮಿಯವರ ಅಕ್ಕಿಗಿರಣಿಯಲ್ಲಿ ಏರ್ಪಡಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಪಕ್ಷದ ಸಂಘಟನೆಗೆ ಶ್ರಮಿಸಿದ್ದೇನೆ, ಕಳೆದೆರಡು ಅವಧಿಯಿಂದಲೂ ಪಕ್ಷದ ಟಿಕೇಟಿಗಾಗಿ ಪ್ರಯತ್ನಿಸಿದ್ದೇನೆ,

ಪಕ್ಷದ ನಾಯಕರು, ಹೈಕಮಾಂಡ್ ನಮ್ಮ ಶ್ರಮವನ್ನು ಪರಿಗಣೆಗೆ ತೆಗೆದುಕೊಳ್ಳದೇ ಟಿಕೇಟ್ ನಿರಾಕರಿಸಿದ್ದರಿಂದ ಇತ್ತೀಚೆಗೆ ಜೆಡಿ–ಎಸ್ ಪಕ್ಷದ ತತ್ವಾದರ್ಶಗಳನ್ನು ಒಪ್ಪಿಗೆ ಮಾಜಿ ಸಿ.ಎಂ. ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿ–ಎಸ್ ಪಕ್ಷವನ್ನು ಸೇರಿದ್ದು, ಕಂಪ್ಲಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿದ್ದೇನೆ ಎಂದು ತಿಳಿಸಿದ ಅವರು ರಾಜ್ಯದಲ್ಲಿ ರೈತ, ಮಹಿಳೆ, ಮಕ್ಕಳು,ಎಲ್ಲಾ ವಯೋಮಾನದವ–ರಿಗೆ ಸೂಕ್ತ ನ್ಯಾಯ ಒದಗಿಸ ಬಲ್ಲ ಏಕೈಕ ವ್ಯಕ್ತಿ ಎಂದರೆ ಅದು ಎಚ್.ಡಿ.ಕುಮಾರಸ್ವಾಮಿ ಮಾತ್ರ, ಅವರು ಈಗಾಗಲೇ ರಾಜ್ಯದಲ್ಲಿ ಜೆಡಿ–ಎಸ್ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಪಂಚರತ್ನ ಯಾತ್ರೆ ಮಾಡುವ ಅಪಾರ ಜನಮನ್ನಣೆ ಗಳಿಸಿದ್ದಾರೆ ಈ ಹಿನ್ನೆಲೆಯಲ್ಲಿ ಕ್ಷೇತ್ರದ ಜನತೆ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಬೆಂಬಲಿಸುವ ಮೂಲಕ ತಮ್ಮನ್ನು ಆಯ್ಕೆ ಮಾಡಬೇಕೆಂದರು.

ಜೆಡಿಎಸ್ ರಾಜ್ಯ ಮುಖಂಡರಾದ ಗಂಗಾವತಿಯ ಪಾಡಗುತ್ತಿ ಅಖ್ತರ್‌ಸಾಬ್ ಮಾತನಾಡಿ ಕಳೆದ 4 ದಶಕಗಳಿಂದಲೂ ಕಂಪ್ಲಿ ಭಾಗ ಅಭಿವೃದ್ಧಿಯಾಗಿಲ್ಲ, ಅಭಿವೃದ್ಧಿಗಾಗಿ ಕ್ರಿಯಾಶೀಲ ಯುವಕರಾಗಿರುವ ರಾಜು ನಾಯಕ ಅವರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಜೆಡಿಎಸ್ ಜಿಲ್ಲಾ ಗೌರವಾಧ್ಯಕ್ಷ ಕೆ.ಎಂ. ಹೇಮಯ್ಯಸ್ವಾಮಿ ಮಾತನಾಡಿ ಕಳೆದ ಮೂರು ಅವಧಿಗಳಲ್ಲಿ ಜೆಡಿಎಸ್ ಪಕ್ಷಕ್ಕೆ ಪ್ರಭಲ ಅಭ್ಯರ್ಥಿಗಳು ಸಿಕ್ಕಿರಲಿಲ್ಲ.

## ಶಾಸಕ ಸೋಮಶೇಖರರೆಡ್ಡಿ ವಿವಿದ ವಾರ್ಡುಗಳಲ್ಲಿ ಮಾತಯಾಚನೆ

ಬಳ್ಳಾರಿ: ಬಳ್ಳಾರಿ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಕಾರ್ಯ ಪ್ರವೃತ್ತರಾಗಿರುವ ನಗರ ಶಾಸಕ ಜಿ.ಸೋಮಶೇಖರರೆಡ್ಡಿ ಅವರು ವಿವಿಧ ವಾರ್ಡ್ಗಳಲ್ಲಿ ಬಿರುಸಿನ ಮತ ಪ್ರಚಾರ ಕಾರ್ಯ ಆರಂಭಿಸಿದ್ದಾರೆ.

ಮಹಾನಗರ ಪಾಲಿಕೆ ವ್ಯಾಪ್ತಿಯ ವಿವಿದ ವಾರ್ಡ್ ಪ್ರದೇಶದಲ್ಲಿ ಭರ್ಜರಿ ಪ್ರಚಾರ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮಹಾನಗರ ಪಾಲಿಕೆ ಸದಸ್ಯ ಶ್ರೀನಿವಾಸ್ ಮೋತ್ಕರ್, ಬಿಜೆಪಿ ಮುಖಂಡರಾದ ಕೃಷ್ಣ ರೆಡ್ಡಿ ಸೇರಿದಂತೆ ಸ್ಥಳೀಯ ಮುಖಂಡರು,



ಕಾರ್ಯಕರ್ತರು ಸಾಥ್ ನೀಡಿದ್ದರು. ಸದಾ ನಿಮ್ಮ ಕರೆಗೆ ಓಗೊಡುವಂತ ವ್ಯಕ್ತಿಗೆ ಮತ ನೀಡಿ ಎಂದು ತಾವು ಮತ್ತೊಮ್ಮೆ ಸ್ಪರ್ಧೆ ಮಾಡಲು ಬಯಸಿದ್ದು ಮತ ನೀಡಬೇಕೆಂದು ಕೋರಿದರು.

## ಜಿತೋದಿಂದ 3, 5 ಮತ್ತು 10 ಕಿ.ಮೀಟರ್ ಮ್ಯಾರಥಾನ್

ಬಳ್ಳಾರಿ: ಬಳ್ಳಾರಿ ನಗರದಲ್ಲಿ ಅಹಿಂಸೆಗಾಗಿ ಜಿತೋದಿಂದ 3, 5 ಮತ್ತು 10 ಕಿಲೋ ಮೀಟರ್ ಮ್ಯಾರಥಾನ್ ನಡೆಯಿತು. ನಗರದ ಹೊರ ವಲಯದ ಮೋಕಾ ರಸ್ತೆಯಲ್ಲಿ ಇದನ್ನು ಆಯೋಜಿಸಿತ್ತು. ಮೊದಲಿಗೆ 10 ಕಿ.ಮೀ ಓಟವನ್ನು ಹಮ್ಮಿಕೊಂಡಿತ್ತು. ಎಸ್.ಕೆ. ಮೋದಿ ಫೌಂಡೇಶನ್‌ನ ಮಂಜು ಮೋದಿ ಅವರು ಇದಕ್ಕೆ ಚಾಲನೆ ನೀಡಿದರು.

ಜಿತೋ ಮಹಿಳಾ ವಿಭಾಗದ ಅಧ್ಯಕ್ಷೆ ಶೆಫಾಲಿ ಜೈನ್ ಸ್ವಾಗತಿಸಿದರು. ಜೀತೋ ಬಳ್ಳಾರಿ ಚಾಪ್ಟರ್‌ನ ಅಧ್ಯಕ್ಷ ರಾಜೇಶ್ ಬಗ್ರೇಚಾ ಮಾತನಾಡಿ, ಜೀತೋ ಅಹಿಂಸಾ ಓಟದ ಭಾಗವಾಗಿ ಹೊಸ ಗಿನ್ನೆಸ್



ದಾಖಲೆಗಳನ್ನು ಸೃಷ್ಟಿಸಿದ್ದಾಗಿ ಹೇಳಿದರು. ಮ್ಯಾರಥ–ಾನ್ ಪೂರ್ಣಗೊಳಿಸಿದ ಎಲ್ಲರಿಗೂ ಪದಕಗಳನ್ನು ನೀಡಲಾಯಿತು.ಎಲ್ಲಾ ವಿವಿಧ ವಿಭಾಗಗಳಿಂದ ಒಟ್ಟು 36 ವಿಜೇತರನ್ನು ಘೋಷಿಸಲಾಯಿತು. ಭಾಗವಹಿಸಿದವರಿಗೆ ಟೀ ಶರ್ಟ್, ಬಿಐಬಿ, ಕ್ಯಾಪ್ ಮತ್ತು ಬ್ಯಾಂಡ್ ಉಪಹಾರ ನೀಡಲಾಯಿತು.



ಬೈಲಹೊಂಗಲ: ಭಗವಾನ್ ಮಹಾವೀರ 2621 ನೇ ಜನ್ಮ ಕಲ್ಯಾಣಕ ಅಂಗವಾಗಿ ಪಟ್ಟಣದ ಶ್ರೀ ಮಹಾವೀರ ಯುವಕ ಸಂಘದ ಆಶ್ರಯದಲ್ಲಿ ಪಟ್ಟಣದಲ್ಲಿ ಸಂಭ್ರಮದಿಂದ ಭಾವಚಿತ್ರದ ಮೆರವಣಿಗೆ ನಡೆಯಿತು.

# ಭಗವಾನ್ ಶ್ರೀ ಮಹಾವೀರ 2622 ನೇ ಜಯಂರಿ ಆಚರಣೆ

ಬಳ್ಳಾರಿ: ಬಳ್ಳಾರಿ ನಗರ ಸೇ–ರಿದಂತೆ ಜಿಲ್ಲೆಯಾದ್ಯಂತ ಭಗವಾನ್ ಶ್ರೀ ಮಹಾವೀರ್ 2622ನೇ ಜಯಂತ್ಯುತ್ಸವವನ್ನು ಮಂಗಳವಾರ ವಿಜೃಂಭಣೆಯಿಂದ ಆಚರಿಸಲಾಯಿತು. ನಗರದ ಬೆಂಗಳೂರು ರಸ್ತೆ, ತೇರು ಬೀದಿ ಬಳಿಯ ಜೈನ್ ದೇವಾಲಯದಲ್ಲಿ ಶ್ರೀ ಮಹಾವೀರ ಜಯಂತ್ಯುತ್ಸವ ನಿಮಿತ್ತ ಬೆಳಿಗ್ಗೆ ವಿವಿಧ ಪೂಜೆಗಳು ವಿಜೃಂಭಣೆಯಿಂದ ನಡೆದವು.

ನಗರ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ ಜನರು ಮಹಾವೀರ ಅವರ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು. ಇದಕ್ಕೂ ಮುನ್ನ ಶ್ರೀ ಮಹಾವೀರ ಸ್ವಾಮೀ ಅವರ ಭಾವಚಿತ್ರ ಮೆರವಣಿಗೆ ಅದ್ದೂ–ರಿಯಿಂದ ನಡೆಯಿತು. ದೇಗುಲದಿಂದ ಪ್ರಾರಂಭವಾದ ಮೆರವಣಿಗೆ ಬ್ರಾಹ್ಮಣ ಬೀದಿ, ಕಾಳಮ್ಮ ಸ್ಟ್ರೀಟ್, ಬೆಂಗಳೂರು



ರಸ್ತೆ ಮೂಲಕ ದೇಗುಲಕ್ಕೆ ತಲುಪಿತು. ವಿವಿಧ ಕಲಾ ತಂಡಗಳು ಮೆರವಣಿಗೆಯಲ್ಲಿ ಗಮನಸೆಳೆಯಿತು.

ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ: ಶ್ರೀ ಮಹಾವೀರ್ ಸ್ವಾಮೀಯ ಜನ್ಮ ಕಲ್ಯಾಣ ಮಹೋತ್ಸವ ಹಿನ್ನೆಲೆ ದೇಗುಲದ ಸಭಾಂಗಣದಲ್ಲಿ ಮುದ್ದು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನಸೆಳೆದವು. ಇದಕ್ಕೂ ಮುನ್ನ ಆಯೋಜಿಸಿದ್ದ ಸಮಾರಂಭಕ್ಕೆ ವಿಮ್ಸ್ ನಿರ್ದೇಶಕ ಡಾ.ಗಂಗಾಧರ್ ಗೌಡ ಅವರು ಚಾಲನೆ ನೀಡಿ ಮಾತನಾಡಿದ ಅವರು, ಭಗವಾನ್ ಶ್ರೀ ಮಹಾವೀರ ಸ್ವಾಮೀಯ ತತ್ವ ಹಾಗೂ ಆದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸುವ ಮೂಲಕ ಇತರರಿಗೆ ಮಾದ–ರಿಯಾಗಬೇಕು, ಬಳ್ಳಾರಿಯಲ್ಲಿ ಎಂಬಿಬಿ–ಎಸ್ ಪದವಿ ಪಡೆದಿದ್ದು, ದೇಗುಲಕ್ಕೆ ಬರಲು ಆಗಿರಲಿಲ್ಲ, ಇಂದು ದೇವರ ದರ್ಶನ ಪಡೆದಿರುವುದು ನನ್ನ ಸೌಭಾಗ್ಯ, ಮೊದಲ ಬಾರಿಗೆಜೈನ್ ಸಮುದಾಯದವರ ಸಮಾರಂಭದಲ್ಲಿ ಭಾಗವಹಿಸಿರುವೆ, ಇದು ಸಂತಸ ಮೂಡಿಸಿದೆ ಎಂದರು.

ಈ ಸಂದರ್ಭದಲ್ಲಿ ಜೈನ್ ಸಮುದಾಯದ ಅಧ್ಯಕ್ಷ ಉತ್ಸವಲಾಲ್ ಬಾಗ್ರೇಚಾ, ಉಪಾಧ್ಯಕ್ಷ ಸೂರಜ್ ಮಲ್ ದಾಂತವಡಿಯಾ, ರೋಟಿ ಮಶಿನ್ ದೇಣಿಗೆ ಮಾಡಿದ ರಾಜೇಂದ್ರ ಕುಮಾರ್ (ಎಸ್.ಎಂ.ಜೈನ್), ಪ್ರವೀಣ್ ಚಂದ್ ಬಾಗ್ರೇಚಾ, ಸಾಕಲ್ ಚಂದ್ ಕವಾಡ್, ಎಸ್ ಜೆ ವೈಎಂ ಅಧ್ಯಕ್ಷ ಬೇರುಲಾಲ್ ಸೇರಿದಂತೆ ಜೈನ್ ಸಮುದಾಯದ ನೂರಾರು ಮುಖಂಡರು ಇತರರು ಉಪಸ್ಥಿತರಿದ್ದರು.

## ಹುಲ್ಲೋಳ್ಳಿ ಅರಿಹಂತ ಸಹಕಾರಿ ಸೌಹಾರ್ದ ಸಂಸ್ಥೆ ಲಾಭದತ್ತ ದಾಪುಗಾಲು



ಹುಕ್ಕೇರಿ: 2021 – 22 ನೇ ಸಾಲಿನ ಆರ್ಥಿಕ ಸಾಲಿನಲ್ಲಿ ಒಟ್ಟು 4 ಕೋಟಿ 55 ಲಕ್ಷ ರೂಪಾಯಿ ಲಾಭ ಮಾಡುವ ಮೂಲಕ ತನ್ನ ಲಾಭದ ನಾಗಾಲೋಟವನ್ನು ಮುಂದುವರೆಸಿದೆ.

ಈ ಕುರಿತು ಮಾದ್ಯಮಗಳೊಂದಿಗೆ ಮಾತನಾಡಿದ ಸಹಕಾರಿ ಸಂಸ್ಥೆಯ ಮುಖ್ಯ ವ್ಯವಸ್ಥಾಪಕ ಆನಂದ ಚೌಗಲಾ 1990 ರಲ್ಲಿ ಸಮಾನ ಮನಸ್ಕರಿಂದ ಪ್ರಾಂಭವಾದ ಈ ಸಂಸ್ಥೆ ಪ್ರತಿ ವರ್ಷ ಲಾಭದಾಯಕವಾಗಿ ಮುನ್ನಡೆದಿದೆ, ಬಡವ–ರಿಗೆ, ಕೂಲಿಕಾರ್ಮಿಕರಿಗೆ , ಸಣ್ಣವ್ಯಾಪಾರಸ್ಥ–ರಿಗೆ ಆರ್ಥಿಕ ಸೌಲಭ್ಯ ಮತ್ತು ಆಕರ್ಷಕ ಬಡ್ಡಿ ನೀಡುವ ಮೂಲಕ ಈಗ ಹೆಮ್ಮರವಾಗಿ ಬೆಳೆದಿದೆ ಇದಕ್ಕೆ ಸಹಕರಿಸಿದ ಸಂಸ್ಥೆಯ ಗ್ರಾಹಕರಿಗೆ, ಸದಸ್ಯರಿಗೆ, ಆಡಳಿತ ಮಂಡಳಿಯವರಿಗೆ ಅಭಿನಂದನೆಗಳು ಎಂದರು.

ನಂತರ ಮಾತನಾಡಿದ ನ್ಯಾಯವಾದಿ ಪದ್ಮಾನಾಭ ಚೌಗಲಾ ಈ ನಮ್ಮ ಸಂಸ್ಥೆ ಕಳಡದ 24 ವರ್ಷಗಳಿಂದ ಶೇಕಡಾ 99 ರಷ್ಟು ಸಾಲ ವಸೂಲಾತಿ ಮಾಡುವ ಮೂಲಕ ಪ್ರತಿ ವರ್ಷ ಲಾಭಗಳಿಸುವಲ್ಲಿ ನಮ್ಮ ಸಿಬ್ಬಂದಿಗಳ ಪಾತ್ರ ಮುಖ್ಯವಾಗಿದೆ,ಸಲಾ ಕೊಡುವದು ಸರಳ ಆದರೆ ಮರು ಪಾವತಿ ಪಡೆಯುವಲ್ಲಿ ಶ್ರಮ ವಹಿಸುವ ಕಾರ್ಯ ಸಿಬ್ಬಂದಿಗಳು ಮಾಡಿದ್ದಾರೆ ಎಂದರು. ಈ ಸಂದರ್ಭದಲ್ಲಿ ಅದ್ಯಕ್ಷ ಜಯಪಾಲ ಚೌಗಲಾ, ಉಪಾದ್ಯಕ್ಷೆ ಶೃತಿ ಪಾಟೀಲ, ರವೀಂದ್ರ ಚೌಗಲಾ, ಭರಮಪ್ಪಾ ಚೌಗಲಾ, ರಾಮಪ್ಪಾ ಗೋಟೂರಿ, ಜಿನ್ನಪ್ಪಾ ಸಪ್ತಸಾಗರ, ಬಸವರಾಜ ಪಾಟೀಲ, ಅಶೋಕ ಚೌಗಲಾ, ಬಾಳಪ್ಪಾ ಸಂಕೇಶ್ವರಿ, ಭೂಪಾಲ ಚೌಗಲಾ, ಬಾಬು ಚೌಗಲಾ ಮೊದಲಾದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

## ಮನೆಮನೆಗೆ ತೆರಳಿ ಗಾಲಿ ಲಕ್ಷ್ಮಿ ಅರುಣಾ ಮತಯಾಚನೆ



ಬಳ್ಳಾರಿ: ಕಲ್ಯಾಣ ರಾಜ್ಯ ಪ್ರಗತಿ ಪಕ್ಷದಿಂದ ಮೊದಲ ಬಾರಿಗೆ ಬಳ್ಳಾರಿ ನಗರ ಕ್ಷೇತ್ರದಿಂದ ಚುನಾವಣಾ ಕಣಕ್ಕಿಳಿದಿರುವ ಗಾಲಿ ಲಕ್ಷ್ಮಿ ಅರುಣಾ ಅವರು ಮಂಗಳವಾರದಂದು ಸಹ ತಮಗೆ ಮತ ನೀಡುವಂತೆ ಮನೆ ಮನೆಗೆ ತೆರಳಿ ಮತಯಾಚನೆ ಕಾರ್ಯವನ್ನು ಮುಂದುವರಿಸಿದರು.

ನಗರದ ನಗರದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ ಬೆಳಿಗ್ಗೆ ವಾಕಿಂಗ್ ನಲ್ಲಿದ್ದ ಜನ–ರಿಗೆ ಅಲ್ಲದೆ. 17ನೇ ವಾರ್ಡಿನ ಜನತಾ ಕಾಲೋನಿ, ಮೊದಲಾದ ಕಡೆ ಮುಂಜಾನೆಯಿಂದಲೇ ಓಣಿ ಓಣಿ ಸಂಚರಿಸಿ ಮತಯಾಚನೆ ಮಾಡಿದ ಲಕ್ಷ್ಮೀ ಅರುಣಾ ಅವರು. ನಗರದ ಅಭಿವೃದ್ಧಿ ದೃಷ್ಟಿಯಿಂದ ಮತ ನೀಡಿ ಬಳ್ಳಾರಿ ನಗರದ ಮೊದಲ ಮಹಿಳಾ ಶಾಸಕಿಯನ್ನಾಗಿ ಮಾಡಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ತಮ್ಮ ಪತಿ ಜನಾರ್ಧನರೆಡ್ಡಿ ಅವರು ಹಿಂದೆ ಸಚಿವರಾಗಿ ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ಅವರು ಅಂದು ಮಾಡಿದ್ದ ರಸ್ತೆಗಳ ಅಗಲೀಕರಣ ಮತ್ತು ಅಭಿವೃದ್ಧಿ ಇಂದಿಗೂ ಸಾಕ್ಷಿಯಾಗಿವೆಂದರು.ಜನತೆ ತಮ್ಮ ಪ್ರದೇಶದ ಕೆಲ ಸಮಸ್ಯೆಗಳ ಬಗ್ಗೆ ಗಮನಕ್ಕೆ ತಂದಾಗ ಸರ್ವ ಜನರ ಸಂಕಷ್ಟಗಳಿಗೆ ಸ್ಪಂದಿಸಲಿದೆಂದು ಭರವಶೆ ನೀಡಿದರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರು, ಸ್ಥಳೀಯ ಕಾರ್ಯಕರ್ತರಿದ್ದರು.

## ತಲೆನೋವಾದ 'ಬಳ್ಳಾರಿ ಕ್ಷೇತ್ರದ' ಕಾಂಗ್ರೆಸ್ ಆಕಾಂಕ್ಷಿಗಳ ಪಟ್ಟಿ

ಬಳ್ಳಾರಿ: ಬಳ್ಳಾರಿ ನಗರ ಕ್ಷೇತ್ರದ ಅಭ್ಯರ್ಥಿಗಳ ಪಟ್ಟಿಯಲ್ಲಿ ಕೇವಲ ನಾರಾಭರತ್ ರೆಡ್ಡಿ ಮತ್ತು ಜೆ.ಎಸ್. ಆಂಜನೇಯಲು ಅವರ ಹೆಸರು ಮಾತ್ರ ಇದ್ದುದರಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರು ಫೈನಲ್ ಲಿಸ್ಟ್ ನೀಡಿ ಅಲ್ಲಿವರೆಗೆ ಇದನ್ನು ಪೆಂಡಿಂಗ್ ಇರಿಸಿ ಎಂದು ಹೇಳಲಾಗುತ್ತದೆ.

ಮಂಗಳವಾರದಂದು ನವದೆಹಲಿಯಲ್ಲಿ ನಡೆದ ಚನಾವಣೆಯ ಎಐಸಿಸಿ ಸಮಿತಿ ಸಭೆಯಲ್ಲಿ ಬಲ್ಲ ಮೂಲಗಳ ಪ್ರಕಾರ 49 ಅಭ್ಯರ್ಥಿಗಳ ಪಟ್ಟಿ ಅಂತಿಮವಾಗಿದೆ ಎನ್ನಲಾಗುತ್ತಿದೆ.

ಮಾಜಿ ಸಿಎಂ ಸಿದ್ದರಾಮಯ್ಯನವರ ಬಣದಲ್ಲಿ ನಾರಾ ಭರತ್ ರೆಡ್ಡಿ ಅವರು ಗುರುತಿಸಿಕೊಂಡಿದ್ದು, ಜೆ.ಎಸ್. ಆಂಜನೇಯಲು ಅವರು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರ ಬಣದಲ್ಲಿ



ಗುರುತಿಸಿಕೊಂಡಿದ್ದರಿಂದ ಬಳ್ಳಾರಿ ನಗರ ಕ್ಷೇತ್ರದಲ್ಲಿ ಟಿಕೆಟ್ ಯಾರಿಗೆ ಕೊಡಬೇಕು ಎಂಬುದು ಬಗ್ಗೆ ಎಐಸಿಸಿಗೆ ಭಾರಿ ತಲೆನೋವಾಗಿ ಪರಿಣಮಿಸಿದೆ.

ಬಳ್ಳಾರಿ ಜಿಲ್ಲೆಗೆ ಸೇರಿದ ಕೆಲ ಮುಖಂಡರು ಭರತ್ ಪರವಾಗಿ ಇದ್ದರೆ, ಮತ್ತೊಂದಡೆ ಕೆಲ ನಾಯಕರು ಆಂಜನೇಯಲು ಪರ ವಾದಿಸಿದ್ದರಿಂದ ಈ ಬೆಳವಣಿಗೆಯಾಗಿದೆ ಎಂದು ಗೊತ್ತಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ನಗರ, ಸಿರುಗುಪ್ಪ, ವಿಜಯನಗರ ಜಿಲ್ಲೆಯಲ್ಲಿ ಕೂಡ್ಲಿಗಿ, ಹರಪನಹಳ್ಳಿ ಕ್ಷೇತ್ರಗಳ ಆಯ್ಕೆ ಹಿರಿಯ ನಾಯಕರಿಗೆ ತಲೆನೋವಾಗಿದೆ.

ಬಹುತೇಕ ನಾರಾಭರತ್ ರೆಡ್ಡಿ ಹೆಸರು ಪ್ರಕಟವಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಆದರೂ ಮಾಜಿ ಶಾಸಕ ಅನಿಲ್‌ಲಾಡ್, ಪ್ರಚಾರ ಸಮಿತಿಯ ಮುಖಂಡ ಜೆ.ಎಸ್.ಆಂಜನೇಯಲು, ರಾವೂರು ಸುನೀಲ್ ದೆಹಲಿಯಲ್ಲಿಯೇ ಬೀಡು ಬಿಟ್ಟು ಸಭೆ ಆರಂಭವಾಗುವ ಮುನ್ನವೇ ಕ್ಷಣದವರೆಗೆ ತಮಗೆ ಟಿಕೆಟ್ ನೀಡಿ ಎಂಬ ಪ್ರಯತ್ನ ಮುಂದುವರೆಸಿದ್ದಾರೆ ಎನ್ನಲಾಗುತ್ತದೆಯಾವ ಕಾರಣಕ್ಕೆ ತಮಗೆ ಪಕ್ಷ ಟಿಕೆಟ್ ನೀಡಬೇಕು ಎಂಬ ಅಂಶಗಳನ್ನು ಚುನಾವಣಾ ಸಮಿತಿಯ ಮುಖಂಡರುಗಳಿಗೆ ತಲುಪಿಸಿದ್ದಾರೆ ಎಂದು ಹೇಳಲಾಗುತ್ತದೆ.

ಪಕ್ಷದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯದ ಉಸ್ತುವಾರಿ ಸುರ್ಜಿವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಉಳಿದ ನಾಯಕರು ಯಾವ ನಿರ್ಧಾರಕ್ಕೆ ಬರಲಿದ್ದಾರೆಂಬುದನ್ನು ಕಾದು ನೋಡಬೇಕಿದೆ.

# ಭಗವಾನ್ ಶ್ರೀ ಮಹಾವೀರ ತಿರ್ಥಂಕರರ 2622ನೇಯ ಜನ್ಮ ಕಲ್ಯಾಣ ಮಹೋತ್ಸವ

ತಾಳಿಕೋಟೆ: ಮಹಾವೀರ ತೀಥ–ಂಕರರು ಜೈನ ಧರ್ಮಕ್ಕೆ ಯಾವಾಗಲೂ ಸತ್ಯಮತ್ತು ಅಹಿಂಸೆಯ ಮತ್ತು ಬಧುಕು, ಮತ್ತು ಬಧುಕಲು ಬಿಡು ಎಂಬ ಸಂದೇಶವನ್ನು ಸಾರಿದ್ದಾರೆ ಕಾರಣ ಮುಂದಿನ ಪಿಳಿಗೆ ಅವರ ಆದ–ರ್ಶಗಳನ್ನು ಪಾಲಿಸಬೇಕಾಗಿದೆ ಎಂದು ಬಾಬಾನಗರದ ಪ್ರತಿಷ್ಠಾಚಾರ್ಯರಾದ ವೃಷಭಉಪದ್ಯಾಯ ಅವರು ನುಡಿದರು.

ಮಂಗಳವಾರರಂದು ಸ್ಥಳೀಯ ಜೈನ ಸಮಾಜದ ವತಿಯಿಂದ ಜೈನ ಸಮಾಜದ ಕೈಲ್ಯಾಣ ಮಂಟಪದಲ್ಲಿ ಏರ್ಪಡಿಸಲಾದ 1008 ಭಗವಾನ್ ಶ್ರೀ ಮಹಾವೀರ ತಿರ್ಥಂಕರರ 2622ನೇಯ ಜನ್ಮ ಕಲ್ಯಾಣ ಮಹೋತ್ಸವ ಕುರಿತು ಏರ್ಪಡಿಸಲಾದ ದಾರ್ಮಿಕ ಸಭೆಯಲ್ಲಿ ದಿವ್ಯ ಸಾನಿದ್ಯ ವಹಿಸಿ ಮಾತನಾಡುತ್ತಿದ್ದ ಅವರು ಮಾನವ ಶ್ರೇಷ್ಠನಾಗಬೇಕಾದರೆ ಹುಟ್ಟಿನಿಂದ ಅಲ್ಲಾ ಧರ್ಮದಿಂದ ಎಂದು ಹೇಳಿದ್ದರೆಂದರು. ದೇವ ಪೂಜೆ ಗುರು ಉಪಾಸನೆ ಸ್ವಾದ್ಯಾಯ ಮನುಷ್ಯ ಸಯಂಮ ತಪ ಹಾಗೂ ದಾನ ಇವು ಆರು ಪ್ರತಿಯೊಬ್ಬ ಗ್ರಹಸ್ತ ಶ್ರಾವಕನು ಪ್ರತಿದಿನ ಆಚರಿಸಲೇಬೇಕಾದ ಅವಶ್ಯ ಕರ್ತವ್ಯಗಳಾಗಿವೆ ಎಂದರು. ಮನುಷ್ಯನಲ್ಲಿ ಶ್ರದ್ಧಾ ಮತ್ತು ಭಕ್ತಿ ಎಂಬುದು ಬೇಕು ಮೊದಲು ಧರ್ಮದಲ್ಲಿ ತೊಡಗಬೇಕು ಸಂಸಾರ ತ್ಯಾಗ ಬೇಡಾ ಆದರೆ ಇತರ ನೇಮವನ್ನು ಪಾಲನೆ ಮಾಡುವದು ಅಗತ್ಯವಾಗಿದೆ ಎಂದರು. ಯಾವಾಗಲೂ ಅಹಿಂಸಾ ತತ್ವವಾದಿಗಳಿರಬೇಕು ಶ್ರದ್ಧಾ ಭಕ್ತಿ ಎಂಬುದಿರಲಿ ಎಂದು ಭಗವಾನ್ ಮಹಾವೀರರ ತತ್ವ ಸಿದ್ಧಾಂತಗಳು ಹೇಗಿದ್ದವೆಂಬುದನ್ನು ಬಹು ಮಾರ್ಮಿಕವಾಗಿ ವಿವರಿಸಿದರು.

ಇನ್ನೋರ್ವ ಉಪನ್ಯಾಸಕರಾಗಿ ಆಗಮಿಸಿದ ವಿದ್ಯಾಧರ ಯಾತಗಿರಿ ಯವರು ಮಾತನಾಡಿ ಭಗವಾನ್ ಮಹಾವೀರರು ಹುಟ್ಟು ಮತ್ತು ಮೋಕ್ಷದ ವಿಷಯ ಕುರಿತು ಅವರು ಸಂದೇಶ ಸಾರಿದ್ದಾರೆ ಅಹಿಂಸೆ ಸತ್ಯ ಆಚಾರ ಬ್ರಹ್ಮಚಾರ್ಯ ಅಂತವುಗಳನ್ನು ಪಾಲಿಸಬೇಕೆಂಬುದರ ಕುರಿತು ಹಿರಿಯ ತಿರ್ಥಂಕರರು ಹೇಳಿದ್ದಾರೆ



24ನೇ ತಿರ್ಥಂಕರರೇ ಭಗವಾನ್ ಮಹಾವೀರರು ಆಗಿದ್ದಾರೆಂದರು. ಕೇವಲ ಜೈನ ಧರ್ಮಿಯರೆಂಬುದು ಹೇಳುವದು ಬೇಡಾ ಆಚ–ರಣೆಯಿಂದ ಜೈನರಾಗಿ ಎಂದು ಅವರು ಹೇಳಿದ್ದಾರೆ ಪಂಚತತ್ವ ಪರಿಪಾಲಕರು ಜೈನಧರ್ಮದವರಾಗಿದ್ದಾರೆಂದು ಪಂಚತತ್ವ ಪಾಲನೆ ಮಾಡಬೇಕಾಗುವದರ ಕುರಿತು ವಿವ–ರಿಸಿದರು. 6ನೇ ಶತಮಾನದಲ್ಲಿ ಈ ಏಷಿಯಾ ಖಂಡ ಹೇಗಿ–ತ್ತು ಎಂಬುದರ ಕುರಿತು ತಿಳಿ ಹೇಳಿದ ಅವರು ಜನರಲ್ಲಿ ಸ್ವಾರ್ಥ ಭಾವನೆ ಎಲ್ಲಡೆಯಲ್ಲಿಯೂ ಕಲಹ ಯಜ್ಞಯಾಗಾದಿಗಳಲ್ಲಿ ಪಾಲ್ಗೊಳ್ಳದೇ ಪ್ರಾಣಿಗಳ ಬಲೆಕೊಡುವಂತಹ ಕಾರ್ಯ ನಡೆಯುತ್ತಿತ್ತು ಇದೆಲ್ಲವನ್ನು ಹೋಗಲಾಡಿಸಲು ಭಗವಾನ್ ಬುದ್ದ ಮಹಾವೀರರು ಅವತರಿಸಿ ಬಂದು ಅಹಿಂಸೆಯ ಪರಿಪಾಲನೆ ಮಾಡಿದವರಾಗಿ ದ್ದಾರೆಂದರು. ಇಂತಹ ಸಂದೇಶಗಳನ್ನು ಜನರಲ್ಲಿ ಪ್ರೀತಿಯೊಂದಿಗೆ ತೆಗೆದುಕೊಂಡು ಹೋಗಬೇಕೆಂದು ಸಲಹೆ ನೀಡಿದ ಯಾತಗಿರಿ ಅವರು ಶಾಂತಿ ಆಗಬೇಕಾದರೆ ಶಾಂತಿ ಸಾಗರ ಮುನಿಗಳನ್ನು ಕೇಳಿದಾಗ ಪಾಪದಲ್ಲಿ ತೊಡಗಿದವರು ತ್ಯಾಗ ಮಾಡಿದರೆ ಶಾಂತಿ ಸ್ಥಾಪನೆಯಾಗುತ್ತದೆ ಎಂಬುದನ್ನು ತಿಳಿಸಿದ್ದಾರೆಂದು ಬಹು ಮಾರ್ಮಿಕವಾಗಿ ಭಗವಾನ್ ಮಹಾವೀರರ ಇತಿಹಾಸ ವಿವರಿಸಿದರು.

ಇನ್ನೋರ್ವ ಉಪನ್ಯಾಸಕಿಂ–ಯಾಗಿ ಆಗಮಿಸಿದ ಶ್ರೀಮತಿ ನಿವೇದಿತಾ ಅಕ್ಷಯಕುಮಾರ ಗೋಗಿ ಅವರು ಮಾತನಾಡಿ ಅಹಿಂಸಾ ಪರಮೋಧರ್ಮ ಎಂಬಂತೆ ಧರ್ಮದ ವಿಷಯದೊಂದಿಗೆ ಮುನ್ನಡೆದವರಿಗೆ ವೈರಾಗ್ಯ ಪ್ರಾಪ್ತವಾಗುತ್ತದೆ.

ನಾನು ತೀರ್ಥಂಕರ ಆಗುವೆ ಎನ್ನುವ ಭಾವನೆ ಹೊಂದಿದ್ದ ಭಗವಾನ್ ಮಹಾವೀರರು ತಮ್ಮ ಭಾವನೆಯಂತೆ ಮುನ್ನಡೆದು ತೋರಿಸಿದ್ದಾರೆ.

ಪುನರ್ ಜನ್ಮ ಕುರಿತು ಹಾಗೂ ಕಡ್ಡಿ ಹುಲ್ಲುಗಳು ಅಲುಗಾಡಲು ಭಗವಂತನ ಪ್ರೇರಣೆಯೇ ಬೇಕಾಗುತ್ತದೆ ಎಂಬುದನ್ನು ವಿವರಿಸಿದ ಅವರು ಭಗವಾನ್ ಮಹಾವೀರರು ಕ್ರೀ.ಪೂ.599, 27–3–598 ರಂದು ತಂದೆ ಸಿದ್ಧಾರ್ಥ, ತಾಯಿ ತ್ರೀಷಿಲಾದೇವಿ ಉದರದಲ್ಲಿ ಜನ್ಮ ತಾಳಿದ ಸವಿಸ್ತಾರ ಅವರ ಜೀವನ ಚ–ರಿತ್ರೆಯನ್ನು ವಿವರಿಸಿದ ಅವರು ಪ್ರಾಣಿ ಹಿಂಸೆ ಮಾಡಬಾರದೆಂಬುದರ ಕುರಿತು ಭಗವಾನ್ ಮಹಾವೀರರು ಹೇಳಿದ ಸಂದೇಶಗಳನ್ನು ವಿವರಿಸಿದರು.

ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ ಅವರು ಧಾರ್ಮಿಕ ಸಭೆಯನ್ನು ದೀಪ ಬೆಳಗಿಸುವದರೊಂದಿಗೆ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಶ್ರವಣ ಬೆಳಗೋಳದ ಕರ್ಮಯೋಗಿ ಚಾರುಕೀರ್ತಿ ಬಟ್ಟಾಚಾರಕ ಪಟ್ಟಾಚಾರ ಮಹಾಸ್ವಾಮಿಜಿ ಇವರ ಭಾವಚಿತ್ರಕ್ಕೆ ಭಾವಪೂರ್ಣ ವಿನಿಯಾಂಜಲಿ ಅರ್ಪಿಸಲಾಯಿತು.

ಕಾರ್ಯಕ್ರಮದ ಮೊದಲಿಗೆ ಭಗವಾನ್ ಮಹಾವೀರ ತೀರ್ಥಂಕರರ ಭವ್ಯ ಶೋಭಾಯಾತ್ರೆಯು ಕುಂಭ ಕಳಸದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿತು. ನಂತರ ಮಂದಿರದಲ್ಲಿ ಭಗವಾನ್ ಮಹಾವೀರರ ಮೂರ್ತಿಗೆ ಮಹಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಸುಮಂಗಲೆಯರಿಂದ ತೊಟ್ಟಿಲು ಕಾರ್ಯಕ್ರಮ ಜರುಗಿತು.

ವೇದಿಕೆಯ ಮೇಲೆ ಜೈನ ಸಮಾಜದ ಗೌರವಾಧ್ಯಕ್ಷರಾದ ಶ್ರೀಮಂತಕುಮಾರ ಸುರಪೂರ, ಅಧ್ಯಕ್ಷರಾದ ಪದ್ಮರಾಜ ಧನಪಾಲ, ಉಪಾಧ್ಯಕ್ಷ ವಜ್ರಕುಮಾರ ಪ್ರಥಮಶೆಟ್ಟಿ, ಖಜಾಂಚಿ ಕುಲಭೂಷಣ ಹುಬ್ಬಳ್ಳಿ, ಸೀತಲಕುಮಾರ ಉಪದ್ಯಾಯ, ಸುರೇಶ ದೇವೂರ(ಕೊಡೇಕಲ್ಲ), ಹಿರಿಯರಾದ ಗಂಗಣ್ಣ ಸುರಪೂರ, ಮಹಿಳಾ ಮಂಡಳದ ಅಧ್ಯಕ್ಷೆ ಶ್ರೀಮತಿ ರಾಜಮತಿ ಹುಬ್ಬಳ್ಳಿ, ಶ್ರೀಮತಿ ನಿರ್ಮಲಾ ಸುರಪೂರ, ಸಂತೋಷ ಪ್ರಥಮ ಶೆಟ್ಟಿ, ಅಜೀತ ಸುರಪೂರ, ಪ್ರಭಾಕರ ಗೋಗಿ, ಮೊದಲಾದವರು ಉಪಸ್ಥಿತರಿದ್ದರು.

ಇದೇ ಸಮಯದಲ್ಲಿ ದಾನಿಗಳಿಗೆ ಅತಿಥಿ ಮಹೋದಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ಶಿಕ್ಷಕ ಗುಂಡುರಾವ್ ಧನಪಾಲ ನಿರೂಪಿಸಿದರು. ಪ್ರಕಾಶ ಸುರಪೂರ ಸ್ವಾಗತಿಸಿದರು. ಶಿಕ್ಷಕ ಪ್ರಕಾಶ ವಂದಿಸಿದರು.

ಚುನಾವಣಾ ಜಾಹೀರಾತು–ಪೂರ್ವಾನುಮತಿ ಕಡ್ಡಾಯ: ಜಿಲ್ಲಾಧಿಕಾರಿ ನಿತೇಶ್ ಪಾಟೀಲ

ಬೆಳಗಾವಿ: ಕರ್ನಾಟಕ ವಿಧಾನಸಭಾ ಚುನಾವಣೆ–2023ಕ್ಕೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಯಾವುದೇ ವಿದ್ಯುನ್ಮಾನ, ಡಿಜಿಟಲ್ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಚುನಾವಣಾ ಜಾಹೀರಾತು ಹಾಗೂ ಬಲ್ಕ್ ಎಸ್‌ಎಂಎಸ್‌ಗಳನ್ನು ಪ್ರಚುರಪಡಿಸುವ ಮುಂಚೆ ಜಿಲ್ಲಾಮಟ್ಟದ ಮಾಧ್ಯಮ ಪ್ರಮಾಣೀಕರಣ ಹಾಗೂ ಕಣ್ಗಾವಲು ಸಮಿತಿ(ಎಂಸಿಎಂಸಿ)ಯ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುವ ಎಂಸಿಎಂಸಿ ಸಮಿತಿಯು ವಿದ್ಯುನ್ಮಾನ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಗೊಳ್ಳುವ ಚುನಾವಣಾ ವಿಷಯ ಹಾಗೂ ಅವುಗಳ ವಿಷಯವಸ್ತು(ಕಂಟೆಂಟ್) ಪರಿಶೀಲಿಸಿ ಅನುಮತಿ ನೀಡಲಿದೆ.

ಸ್ಥಳೀಯ ಕೇಬಲ್ ನೆಟವರ್ಕ, ಟಿವಿ ಚಾನೆಲ್‌ಗಳು, ಖಾಸಗಿ ಎಫ್‌ಎಂ ರೇಡಿಯೋ ಕೇಂದ್ರಗಳು, ಸಿನಿಮಾಮಂದಿರಗಳು, ಸಾಮಾಜಿಕ ಜಾಲತಾಣಗಳು ಹಾಗೂ ಮೊಬೈಲ್ ಸರ್ವೀಸ್ ಪ್ರೊವೈಡರ್‌ಗಳು ಯಾವುದೇ ರೀತಿಯ ಚುನಾವಣಾ ಜಾಹೀರಾತು ಅಥವಾ ಬಲ್ಕ್ ಎಸ್‌ಎಂಎಸ್ ಪ್ರಸಾರ ಮಾಡುವ ಮುಂಚೆ ಎಂಸಿಎಂಸಿ ನೀಡಿರುವ ಪೂರ್ವಾನುಮತಿ ಪ್ರಮಾಣಪತ್ರವನ್ನು ಜಾಹೀರಾತು ನೀಡುವ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಗಳ ಕಡೆಯಿಂದ ಪಡೆದುಕೊಳ್ಳಬೇಕು.

ಭಾರತ ಚುನಾವಣಾ ಆಯೋಗದ ನಿರ್ದೇಶನಗಳು ಮತ್ತು ಚಾಲ್ತಿಯಲ್ಲಿರುವ ವಿವಿಧ ನಿಯಮಾವಳಿಗಳನ್ನು ಪಾಲಿಸುವ ಮೂಲಕ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಎಲ್ಲ ಮಾಧ್ಯಮದವರು ಹಾಗೂ ರಾಜಕೀಯ ಪಕ್ಷದ ಪ್ರತಿನಿಧಿಗಳು ಸಹಕರಿಸಬೇಕು.

**ಮಾಧ್ಯಮಗಳ ಮೇಲೆ ನಿಗಾ:**

**ಮಾ**ದರಿ ನೀತಿ ಸಂಹಿತೆ ಜಾರಿಗೆ ಬಂದ ತಕ್ಷಣದಿಂದಲೇ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಕಟವಾಗುವ ಚುನಾವಣಾ ಜಾಹೀರಾತು ಮತ್ತು ಸಂದೇಹಾಸ್ಪದ ಪೇಡ್‌ನ್ಯೂಸ್‌ಗಳ ಮೇಲೆ ನಿಗಾ ವಹಿಸಲಾಗುತ್ತಿದೆ.

ಸಮಿತಿಯು ಮುದ್ರಣ, ವಿದ್ಯುನ್ಮಾನ ಮಾಧ್ಯಮಗಳಾದ ಕೇಬಲ್ ಚಾನೆಲ್/ಟಿವಿ ಚಾನೆಲ್‌ಗಳು, ರೇಡಿಯೋ ಹಾಗೂ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲಿದ್ದು, ಅನುಮತಿ ಪಡೆಯದೇ ಚುನಾವಣಾ ಜಾಹೀರಾತು ನೀಡಿರುವುದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಿದೆ.

ಯಾವುದೇ ಪಕ್ಷ ಅಥವಾ ಅಭ್ಯರ್ಥಿಗಳ ಪರವಾಗಿ ಜಾಹೀರಾತುಗಳನ್ನು ಪ್ರಕಟಿಸಿದ ಸಂದರ್ಭದಲ್ಲಿ ಆಯಾ ಮಾಧ್ಯಮಗಳಿಗೆ ನಿಗದಿಪಡಿಸಲಾದ ಜಾಹೀರಾತು ದರ ಅಥವಾ ಆಯಾ ಮಾಧ್ಯಮಗಳ ವಾಸ್ತವಿಕ ವಾಣಿಜ್ಯ ಜಾಹೀರಾತು ದರ ಪರಿಗಣಿಸಿ ಅದರ ಮೊತ್ತವನ್ನು ಪಕ್ಷ ಅಥವಾ ಅಭ್ಯರ್ಥಿಯ ಚುನಾವಣಾ ವೆಚ್ಚಕ್ಕೆ ಸೇರಿಸಲು ಚುನಾವಣಾ ವೆಚ್ಚ ವೀಕ್ಷಕರಿಗೆ ಸಮಿತಿಯು ಮಾಹಿತಿ ನೀಡಲಿದೆ.

ಅದೇ ರೀತಿಯಲ್ಲಿ ಯಾವುದೇ ಮಾಧ್ಯಮದಲ್ಲಿ ಪ್ರಸಾರವಾದ ಚುನಾವಣಾ ಜಾಹೀರಾತುಗಳಿಗೆ ಪೂರ್ವಾನುಮತಿ ಪಡೆಯಲಾಗಿದೆಯೇ ಎಂಬುದನ್ನು ಪರಿಶೀಲಿಸಲಾಗವುದು. ಅಭ್ಯರ್ಥಿಯ ಅಥವಾ ಪಕ್ಷದ ಒಪ್ಪಿಗೆಯಿಂದ ನೀಡಲಾಗಿರುವ ಜಾಹೀರಾತುಗಳ ವೆಚ್ಚವನ್ನು ಸಂಬಂಧಪಟ್ಟ ಪಕ್ಷ ಅಥವಾ ಅಭ್ಯರ್ಥಿಯ ವೆಚ್ಚಕ್ಕೆ ಸೇರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

**ಮೀಡಿಯಾ ಮಾನಿಟರಿಂಗ್ ಸೆಲ್:**

ಚುನಾವಣಾ ಜಾಹೀರಾತುಗಳ ಪರಿಶೀಲನೆಗಾಗಿ "ವಾರ್ತಾಭವನ" ಉಪ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನ್ಯಾಯಾಲಯ ಆವರಣ" (ಮೊಬೈಲ್ ಸಂಖ್ಯೆ 9448589639 ಅಥವಾ 9480841233) ಈ ಕಚೇರಿಯಲ್ಲಿ ಮೀಡಿಯಾ ಮಾನಿಟರಿಂಗ್ ಕೇಂದ್ರ ಸ್ಥಾಪಿಸಲಾಗಿರುತ್ತದೆ.

ಜಾಹೀರಾತುಗಳನ್ನು ಪ್ರಕಟ ಅಥವಾ ಪ್ರಸಾರ ಮಾಡಲು ಪೂರ್ವಾನುಮತಿ ಪಡೆಯಲು ಈ ಕೇಂದ್ರದಲ್ಲಿ ಅರ್ಜಿ ನಮೂನೆಗಳು ಲಭ್ಯವಾಗಿರುತ್ತವೆ. ಅಭ್ಯರ್ಥಿಗಳು ಅಥವಾ ರಾಜಕೀಯ ಪಕ್ಷಗಳು ಭರ್ತಿ ಮಾಡಿದ ಅರ್ಜಿ ಜತೆಗೆ ಜಾಹೀರಾತಿನ ಎರಡು ಸಿಡಿ ಹಾಗೂ ಹಸ್ತಪ್ರತಿ(ಸ್ಕ್ರಿಪ್ಟ್) ಸಲ್ಲಿಸಬೇಕು.

ಜಿಲ್ಲಾ ಮಾಧ್ಯಮ ಪ್ರಮಾಣೀಕರಣ ಮತ್ತು ಕಣ್ಗಾವಲು(–ಎಂಸಿಎಂಸಿ) ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ, ಪೂರ್ವಾನುಮತಿ ನೀಡಲಿದೆ.

ಆದ್ದರಿಂದ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಜಾಹೀರಾತುಗಳನ್ನು ಪ್ರಕಟ ಅಥವಾ ಪ್ರಸಾರ ಮಾಡಲು ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು ಎಂದು ಜಿಲ್ಲಾ ಚುನಾವಣಾಧಿಕರಿಯೂ ಆಗಿರುವ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಹಿಳಾ ಆರೋಗ್ಯ; ಹೊಸ ದೃಷ್ಟಿಕೋನಗಳು

ಬೆಳಗಾವಿ: ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯದ ವೈಜ್ಞಾನಿಕ ಸಂಸ್ಥೆಯ 41ನೇ ಮುಂದುವರೆದ ವೈದ್ಯಕೀಯ ಶಿಕ್ಷಣ (ಸಿಎಂಇ) ಕಾರ್ಯಾಗಾರವನ್ನು ಇದೇ ದಿ. 8 ಮತ್ತು 9 ಏಪ್ರೀಲ್ 2023ರಂದು ಕೆಎಲ್‌ಇ ಕನ್ವೆನ್ಷನ್ ಸೆಂಟರ( ಬಿ ಎಸ್ ಜೀರಗೆ) ಸಭಾಭವನದಲ್ಲಿ ಏರ್ಪಡಿಸಲಾಗಿದ್ದು, "ಮಹಿಳೆಯರ ಆರೋಗ್ಯ: ಹೊಸ ದೃಷ್ಟಿಕೋನ" ಎಂಬ ವಿಷಯದ ಮೇಲೆ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ.

ಸ್ತ್ರೀ ತಮ್ಮ ಬಾಲ್ಯದಿಂದಲೂ ಅನೇಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ, ನಮ್ಮ ಜನಸಂಖ್ಯೆಯ ಅರ್ಧದಷ್ಟು ಸ್ತ್ರೀ ಇದ್ದರೂ ಕೂಡ, ಲಿಂಗ ಅಸಮಾನತೆಗಳಿಂದಾಗಿ ನಿರ್ಲಕ್ಷಿಸಲ್ಪಟ್ಟು ಸಮಯಕ್ಕೆ ಸರಿಯಾಗಿ ಸಲಹೆ, ಚಿಕಿತ್ಸೆ ಪಡೆಯುವುದಿಲ್ಲ.

ಆದ್ದರಿಂದ ವಿವಿಧ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ ಹದಿಹರೆಯದವರು, ಲೈಂಗಿಕ ಸಮಸ್ಯೆಗಳು, ಬಂಜೆತನ, ದೀರ್ಘಕಾಲದ/ಅನಿಯಮಿತ ಮುಟ್ಟಿನ ಚಕ್ರಗಳು, ಅಧಿಕ ರಕ್ತಸ್ರಾವ, ಪಾಲಿಸಿಸ್ಟಿಕ್ ಓವೇರಿಯನ್ ಸಿಸ್ಟ್ ಸಿಂಡ್ರೋಮ್ ಚರ್ಮದ ಅಸ್ವಸ್ಥತೆಗಳು, ಪ್ರಸವಪೂರ್ವ ತಪಾಸಣೆ, ಪೋಷಕಾಂಶತೆ, ಮಹಿಳೆಯರಲ್ಲಿ ಹೃದ್ರೋಗದ ಹೆಚ್ಚಳ.

ಕಾನೂನು ರೀತಿಯಲ್ಲಿ ಗರ್ಭಪಾತ, ಋತುಬಂಧ, ಮನೋವೈದ್ಯಕೀಯ ಸಮಸ್ಯೆ ಹಾಗೂ ರಕ್ತಹೀನತೆ ಕುರಿತು ಚರ್ಚಿಸಲಾಗುತ್ತದೆ.

ಹೆರಿಗೆ ಸಂದರ್ಭದಲ್ಲಿ ಮಹಿಳೆಯರ ಮರಣ ತಡೆಗಟ್ಟುವ ಹೊಸ ಸವಾಲುಗಳ ಕುರಿತು ಅಹ್ಮದಾಬಾದಿನ ಡಾ. ಅಲ್ಪೇಶ ಗಾಂದಿ ಅವರು ಡಾ. ಬಿ ಎಸ್ ಜೀರಗೆ ದತ್ತಿ ಉಪನ್ಯಾಸದಲ್ಲಿ ಮಾತನಾಡಲಿದ್ದಾರೆ.

ಎರಡು ದಿನಗಳ ಕಾಲ ಉಪನ್ಯಾಸ, ಗುಂಪು ಚರ್ಚೆ, ಪ್ರಶ್ನೋತ್ತರ, ರಸಪ್ರಶ್ನೆ ಜರುಗಲಿದೆ. ವೈದ್ಯಕೀಯ ಶಿಕ್ಷಣ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವ ವೈದ್ಯರಿಗೆ ಕರ್ನಾಟಕ ಮೆಡಿಕಲ್ ಕೌನ್ಸಿಲ್ ನಾಲ್ಕು ಕ್ರೆಡಿಟ್ ಅವರ್ಸ್ ನೀಡಲಿದೆ.

ಸಾಮಾನ್ಯ ವೈದ್ಯರು ಸೇರಿದಂತೆ ಎಲ್ಲರೂ ಈ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದ್ದು, 1200 ರೂ.ಗಳನ್ನು ಪ್ರತಿನಿಧಿ ಶುಲ್ಕ ನೀಡಿ ತಮ್ಮ ಹೆಸರು ನೊಂದಾಹಿಸಿಕೊಳ್ಳಬಹುದು. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಡಾ. ಅನುಷಾ ಮಾಲಾಪುರೆ 9964034168 ಅವರನ್ನು ಸಂಪರ್ಕಿಸಲು ಕೋರಲಾಗಿದೆ.

# ವಿಶೇಷಚೇತನರು ಮತದಾನ ಮಾಡಲು ವಾಹನ ವ್ಯವಸ್ಥೆ



ತುಮಕೂರು: ಜಿಲ್ಲೆಯಲ್ಲಿ ಸುಮಾರು 29,700 ವಿಶೇಷಚೇತನ ಮತದಾರರಿದ್ದು, ಇವರೆಲ್ಲರೂ ಮೇ 10ರಂದು ಮತದಾನ ಮಾಡಲು ಅನುಕೂಲವಾಗುವಂತೆ ಅಂದು ಪ್ರತಿ ಗ್ರಾಮಪಂಚಾಯಿತಿಗೆ ಒಂದರಂತೆ ವಾಹನ ಸೌಲಭ್ಯ ಕಲ್ಪಿಸಲಿದ್ದು, ಈ ಸೌಲಭ್ಯವನ್ನು ಬಳಸಿಕೊಂಡು ವಿಶೇಷಚೇತನರು ತಮ್ಮ ವ್ಯಾಪ್ತಿಯ ಮತಗಟ್ಟೆಗೆ ತೆರಳಿ ತಪ್ಪದೆ ಮತದಾನ ಮಾಡುವಂತೆ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ಮನವಿ ಮಾಡಿದರು.

ವಿಕಲಚೇತನ ಮತದಾರರು ತಮ್ಮ ಹಕ್ಕನ್ನು ಚಲಾಯಿಸುವುದಕ್ಕಾಗಿ ಮತಗಟ್ಟೆಗಳಿಗೆ ತಲುಪಲು ಪ್ರತಿ ಗ್ರಾಮ ಪಂಚಾಯಿತಿ 6–8 ಕಿಲೋ ಮೀಟರ್ ವ್ಯಾಪ್ತಿಗೆ ಒಂದು ಆಟೋವನ್ನು ನೀಡಲಾಗುವುದು ಎಂದು ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸ್ವೀಪ್ ಸಮಿತಿಯಿಂದ ಇಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಕರ್ನಾಟಕ ವಿಧಾನ ಸಭಾ ಚುನಾವಣೆ 2023ರ' ವಿಕಲಚೇತನರ ಹಾಗೂ ತೃತೀಯ ಲಿಂಗಿ ಮತದಾರರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಲೆ ಮತ್ತು ಸಂಗೀತಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅತ್ಯುತ್ತಮ ಕಲಾವಿದರನ್ನು ರಾಯಭಾರಿಯಾಗಿ ಆಯ್ಕೆ ಮಾಡಲಾಗಿದೆ. ಅವರು ತಮ್ಮ ಸಂಗೀತ ಗಾಯನದ ಮೂಲಕ ಮತದಾರರಲ್ಲಿ ಅರಿವು ಮೂಡಿಸಬೇಕು.

ತೃತೀಯ ಲಿಂಗಿ ಮತದಾರರು ತಮ್ಮ ಹಕ್ಕನ್ನು ಕಡ್ಡಾಯವಾಗಿ ಚಲಾಯಿಸುವುದರ ಕುರಿತು ತೃತೀಯ ಲಿಂಗಿಗಳಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಮತದಾನದ ದಿನವನ್ನು ಹಬ್ಬದ ರೀತಿಯಲ್ಲಿ ಆಚರಿಬೇಕು ಹಾಗೂ ಯಾವ ಮತದಾರ ಮತಗಟ್ಟೆಗೆ ಬರಲು ಸಾಧ್ಯವಿಲ್ಲವೋ ಅಂತಹ ಮತದಾರ ನಮೂನೆ 12ಡಿ ಅನ್ನು ಪಡೆದು ಅಂಚೆಮತ ಚಲಾಯಿಸಬೇಕು.

ಉಳಿದವರು ಮತಗಟ್ಟೆಗಳಿಗೆ ಬಂದು ಮತ ಚಲಾಯಿಸಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಕೆ ವಿದ್ಯಾಕುಮಾರಿ ಮಾತನಾಡಿ, ವಿಧಾನಸಭಾ ಚುನಾವಣೆಗೆ ಮೇ 10ರಂದು ಮತದಾನ ನಡೆಯಲಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಶೇ.82ರಷ್ಟು ಮತದಾನವಾಗಿರುತ್ತದೆ. ಈ ಬಾರಿ ಶೇ.100ರಷ್ಟು ಮತದಾನ ಆಗಬೇಕಿದೆ. ನಗರ ಭಾಗದಲ್ಲಿ ಶೇಕಡಾ 65ರಷ್ಟು ಮತದಾನ ಪ್ರಮಾಣ ಇದ್ದು, ಇದೂ ಸಹ ಶೇ.100ಕ್ಕೆ ಹೆಚ್ಚಳವಾಗಬೇಕಿದೆ ಎಂದು ಹೇಳಿದರು.

ಯುವ ಮತದಾರರು ಮತಗಟ್ಟೆಗಳಿಗೆ ಬಂದು ಮತ ಚಲಾವಣೆ ಮಾಡದೆ ಮತದಾನದಿಂದ ಹೊರಗೆ ಉಳಿಯುತ್ತಿದ್ದಾರೆ. ಆದ್ದರಿಂದ ಯುವ ಮತದಾರರು ಮತ ಚಲಾವಣೆ ಮಾಡುವ ಹಾಗೇ ಅವರಲ್ಲಿ ಮತದಾನದ ಪ್ರಾಮುಖ್ಯತೆಯ ಬಗ್ಗೆ ತಿಳಿಸಬೇಕು.

ತೃತೀಯ ಲಿಂಗಿಗಳು ಮತಗಟ್ಟೆಗಳಿಗೆ ಬರಲು ಹಿಂದೇಟು ಹಾಕುವ ಮೂಲಕ ಮತದಾನದಿಂದ ದೂರ ಉಳಿಯುತ್ತಿದ್ದಾರೆ ಎಂದರು.

ವಿಕಲಚೇತನರು ಇಂದು ನಗರದ ಜ್ಯೂನಿಯರ್ ಕಾಲೇಜು ಮೈದಾನದಿಂದ ಜಿಲ್ಲಾ ಪಂಚಾಯತ್ ಆವರಣದವರೆಗೆ ಮೂರು ಚಕ್ರದ ಬೈಕ್ ಹಾಗೂ ಸೈಕಲ್ ಮೂಲಕ ಮತದಾನದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಾಥಾ ಮೂಲಕ ಮತದಾನದ ಮಹತ್ವ ಕುರಿತು ಎಲ್ಲರಲ್ಲಿ ಅರಿವು ಮೂಡಿಸಲಾಯಿತು ಎಂದರು. ಭಾರತದ ಸಂವಿಧಾನದಲ್ಲಿ ಎಲ್ಲರಿಗೂ ಮತ ಚಲಾಯಿಸುವ ಹಕ್ಕು ಇದೆ. ಜಿಲ್ಲೆಯ ಎಲ್ಲಾ ಮತದಾರರು ತಮ್ಮ ಹಕ್ಕನ್ನು ಚಲಾಯಿಸುವುದರ ಮೂಲಕ ಜಿಲ್ಲೆಯ ಮತದಾನದ ಪ್ರಮಾಣ ಶೇಕಡಾ ನೂರರಷ್ಟು ಆಗಬೇಕು ಎಂದರಲ್ಲದೇ, ಮತದಾನದ ಮಹತ್ವವನ್ನು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸವನ್ನು ಸ್ವೀಪ್ ಸಮಿತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

# ಭಗವಾನ ಮಹಾವೀರರ ತತ್ವ ಪಾಲನೆ ಅಗತ್ಯ: ವಿವೇಕ ಜತ್ತಿ



ಗೋಕಾಕ: ಸಮಾಜದ ಶಾಂತಿ ಹಾಗೂ ಸಮೃದ್ಧಿಗೆ ಜೈನ ಧರ್ಮ ಕೊಡುಗೆ ಅಪಾರವಾಗಿದೆ. ಇಡೀ ಜಗತ್ತಿಗೆ ಶಾಂತಿ, ಅಹಿಂಸೆ ಮಾರ್ಗ ತೋರಿದ ಮಹಾವೀರ ತತ್ವ ಅಳವಡಿಸಿಕೊಳ್ಳಬೇಕು ಎಂದು ಕಾಂಗ್ರೆಸ್ ಮುಖಂಡ ವಿವೇಕ ಜತ್ತಿ ಹೇಳಿದರು.

ನಗರದ ಹಿಲ್ ಗಾರ್ಡನನಲ್ಲಿ ಮಂಗಳವಾರ ಭಗವಾನ ಮಹಾವೀರ ಜಯಂತಿ ನಿಮಿತ್ತ ಭಗವಾನ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಸತ್ಯ, ಅಹಿಂಸೆ ಮತ್ತು ತ್ಯಾಗವನ್ನು ನಾಡಿಗೆ ಸಾರಿದ ಮಹಾವೀರರ ತತ್ವ ಮತ್ತು ಆದರ್ಶಗಳು ಇಂದಿನ ಜನತೆಗೆ ಅಗತ್ಯವಾಗಿದ್ದು, ಅವುಗಳನ್ನು ಪಾಲನೆ ಮಾಡಬೇಕು. ಮನುಷ್ಯ ಯಾವುದರ ಬಗ್ಗೆಯೂ ಅತಿಯಾದ ವ್ಯಾಮೋಹ ಇಡದೇ, ತ್ಯಾಗ, ಅಹಿಂಸೆ ಮತ್ತು ಸತ್ಯದಲ್ಲಿ ನಡೆಯುತ್ತಾ, ಭಗವಾನ್ ಮಹಾವೀರರ ಆದರ್ಶಗಳನ್ನು ಪಾಲನೆ ಮಾಡುವತ್ತ ಮುಂದಾಗಬೇಕು ಎಂದು ತಿಳಿಸಿದರು.

ಮಹಾವೀರರು ಒಂದು ಧರ್ಮ ಮತ್ತು ಜಾತಿಗೆ ಸೀಮಿತವಾಗದೆ ವಿಶ್ವಕ್ಕೆ ಶಾಂತಿ ಮತ್ತು ಅಹಿಂಸಾ ಮಾರ್ಗವನ್ನು ಅನುಸರಿಸುವಂತೆ ಸಾರಿದ ಮಹಾನ್ ವ್ಯಕ್ತಿಯಾಗಿದ್ದು, ಇಂದಿನ ಪರಿಸ್ಥಿಗೆ ಅವರ ಆದರ್ಶಗಳು ಅಗತ್ಯವಿದೆ ಎಂದು ತಿಳಿಸಿದರು.

ಹಿಂಸೆ, ಕ್ರೌರ್ಯಗಳು ಮಾನವೀಯತೆ ಯನ್ನು ಮರೆಸುತ್ತಿರುವ ದಿನಗಳಲ್ಲಿ ಜೈನ ಧರ್ಮದ ಅಹಿಂಸಾ ಮತ್ತು ತ್ಯಾಗದ ಮಾರ್ಗಗಳು ಇಂದಿನ ಜನತೆಗೆ ಅಗತ್ಯವಿದೆ ಎಂದು ತಿಳಿಸಿದರು.

ಈ ವೇಳೆ ವಿಠ್ಠಲ ಪರಸಣ್ಣವರ, ಮಹೇಶ ಚಿಕ್ಕೋಡಿ, ಪ್ರಲ್ಹಾದ್ ನಾಡಗೇರ, ಸುರೇಶ ಮಡ್ಡಪಗೋಳ, ಮಂಜು ಸನದಿ ಸೇರಿದಂತೆ ಇತರರು ಇದ್ದರು.

# ಮತದಾನ ನಾಗರಿಕನ ಪವಿತ್ರ ಕರ್ತವ್ಯ: ಕಬ್ಬಗೋಳ



ಹುಕ್ಕೇರಿ: ತಾಲೂಕಿನ ಸಾರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಏರ್ಪಡಿಸಿದ್ದ ಮತದಾನ ಜಾಗೃತಿ ಅಭಿಯಾನಕ್ಕೆ ಪಂಚಾಯಿತಿ ಅಭಿವೃದ್ಧಿ (ಪಿಡಿಒ) ಅಧಿಕಾರಿ ಎಸ್.ಎಸ್.ಕಬ್ಬಗೋಳ ಚಾಲನೆ ನೀಡಿದರು.

ಮತದಾನ ಅಭಿಯಾನ ಸಾರಾಪುರ, ಶಿರಹಟ್ಟಿ ಬಿ.ಕೆ ಹಾಗೂ ಶಿರಹಟ್ಟಿ ಕೆ.ಡಿ. ಗ್ರಾಮಗಳಲ್ಲಿ ಸಂಚಾರ ಮಾಡಿ ಮತದಾನ ಜಾಗೃತಿ ಮಾಡಲಾಯಿತು. ಮತದಾನ ಜಾಗೃತಿಗಾಗಿ ಜಿಂಗಲ್ಸ್ ಮತ್ತು ಸ್ಲೋಗನಗಳ ಫಲಕಗಳ ಮೂಲಕ ಪ್ರಚಾರ ಕೈಗೊಳ್ಳಲಾಯಿತು.

ಈ ವೇಳೆ ಪಿಡಿಒ ಕಬ್ಬಗೋಳ ಮಾತನಾಡಿ, ಮತದಾನ ಪ್ರತಿ ನಾಗರಿಕನ ಪವಿತ್ರವಾದ ಕರ್ತವ್ಯ. ಎಲ್ಲ ದಾನಗಳಲ್ಲಿ ಮತದಾನ ಬಹಳ ಶ್ರೇಷ್ಠವಾಗಿದೆ.

ಮತದಾರರಿಗೆ ಹೆಚ್ಚಿನ ಜಾಗೃತಿ ಮೂಡಿಸಲು ಕ್ರಮಕೈಕೊಳ್ಳಲಾಗಿದೆ. ಮತದಾನ ಮಾಡುವುದು ನಮ್ಮಲ್ಲೆರ ಕರ್ತವ್ಯ ಮತ್ತು ಹಕ್ಕು. ಯಾವುದೇ ಆಮಿಷಗಳಿಗೆ ಒಳಗಾಗದೇ ಮತದಾನ ಮಾಡಬೇಕು ಎಂದರು.

ಗ್ರಾಪಂ ಅಧ್ಯಕ್ಷೆ ರೇಖಾ ಹಾಲಟ್ಟಿ, ಲೆಕ್ಕ ಸಹಾಯಕ ಭೀರಪ್ಪ ಕರೆಪ್ಪಗೋಳ, ಸಿಬ್ಬಂದಿ ಯಲ್ಲಪ್ಪಾ ಕಾಂಬಳೆ ಮತ್ತಿತರರು ಉಪಸ್ಥಿತರಿದ್ದರು. ತಾಲೂಕಾ ಸ್ವೀಪ್ ಸಮಿತಿ ಹಾಗೂ ಗ್ರಾಪಂ ಸಹಯೋಗದಲ್ಲಿ ಈ ಅಭಿಯಾನ ನಡೆಯಿತು.

# ದೇಶದ ಭವಿಷ್ಯ, ಬೆಳವಣಿಗೆಗೆ ಮತದಾನ ಅಗತ್ಯ: ಪಿಡಿಒ ರೇಖಾ ಸೋಮನ್ನವರ್



ಕಾಗವಾಡ: ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ 18 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮತ ಚಾಲಾಯಿಸುವಂತೆ ಪಿಡಿಒ ರೇಖಾ ಸೋಮನ್ನವರ್ ಹೇಳಿದರು.

ಕಾಗವಾಡ ಮತಕ್ಷೇತ್ರ ವ್ಯಾಪ್ತಿಯ ಸಿದ್ದೇವಾಡಿ ಗ್ರಾಮದಲ್ಲಿ ಸೋಮವಾರ ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಹಿ ಮಾಡುವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದ ಭವಿಷ್ಯ ಹಾಗೂ ಬೆಳವಣಿಗೆ ದೃಷ್ಟಿಯಿಂದ ಪ್ರತಿಯೊಬ್ಬರು ಮತದಾನ ಮಾಡಬೇಕು, ಯುವ ಜನತೆ ಮತದಾನ ಬಗ್ಗೆ ತಿಳಿದುಕೊಂಡು ಮತ್ತೊಬ್ಬರಿಗೂ ತಿಳಿಸಿಕೊಡಬೇಕು. ಸಿದ್ದೇವಾಡಿ ಬೂತ್ ನಲ್ಲಿ ಈ ಬಾರಿ ಚುನಾವಣೆಯಲ್ಲಿ ಶೇ 100 ರಷ್ಟು ಮತದಾನವಾಗುವ ಗುರಿ ಸಾಧಿಸಬೇಕು ಎಂದು ಹೇಳಿದರು.

18 ವರ್ಷದ ಯುವ ಮತದಾರರು ಮತ್ತು ಗ್ರಾಮಸ್ಥರು ಸಹಿ ಮಾಡುವ ಮೂಲಕ ಅಭಿಯಾನಕ್ಕೆ ಕೈ ಜೋಡಿಸಿದರು. ರಮೇಶ್ ಆಜೂರ್, ಅಶ್ವಿನಿ ಆಜೂರ, ಶಿವರಾಯ ಕಾಳೆಲಿ, ಸತ್ಯವ್ವ ಜೂಗಳೆ, ಮುತ್ತಣ್ಣ ಮಾಳಿ, ದಶರಥ ಖೋತ, ಮಾರುತಿ ಖೋತ ಮುಂತಾದವರು ಭಾಗಿಯಾಗಿದ್ದರು.

# ಹೊರಗಿನವರ ಆಟ ಕರ್ನಾಟಕದಲ್ಲಿ ನಡೆಯುವುದಿಲ್ಲ: ಬಂಡೆಪ್ಪ ಖಾಶೆಂಪುರ್



ಬೀದರ್: ಮೋದಿ ಹವಾ ಕೇಂದ್ರದ್ದು ರಾಜ್ಯಕ್ಕೆ ಸಂಬಂಧಿಸಿದ್ದಲ್ಲ. ಇದು ದಕ್ಷಿಣ ಭಾರತ, ಇಲ್ಲಿನ ವಾತಾವರಣ, ದೂರದೃಷ್ಟಿನೇ ಬೇರೆ. ಇಲ್ಲಿನ ಜನ ಪ್ರಾದೇಶಿಕ ಪಕ್ಷಕ್ಕೆ ಬೆಂಬಲ ಕೊಡ್ತಾರೆ ಎಂದು ಮಾಜಿ ಸಚಿವರು, ಜೆಡಿ–ಎಸ್ ಶಾಸಕಾಂಗ ಪಕ್ಷದ ಉಪನಾಯಕರು, ಜೆಡಿಎಸ್ ಕೋರ್ ಕಮಿಟಿಯ ಅಧ್ಯಕ್ಷರು, ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರು ಹೇಳಿದರು.

ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಖಾಶೆಂಪುರ್ ಪಿ ಗ್ರಾಮದ ಹೊರವಲಯದಲ್ಲಿರುವ ತಮ್ಮ ನಿವಾಸದಲ್ಲಿ ಮಂಗಳವಾರ ಮಾಧ್ಯಮದವ ರೊಂದಿಗೆ ಮಾತನಾಡಿದ ಅವರು, ನಮ್ಮಲ್ಲಿ ಹೊರಗಿನವರ ಯಾರ ಆಟವು ನಡೆಯದು. ಹಿಂದಿನಿಂದಲೂ ಅವ್ರೆಲ್ಲಾ ರಾಜ್ಯಕ್ಕೆ ಬಂದು ಹೋಗಿದ್ದಾರೆ. ಆದರೆ ಇಲ್ಲಿಯವರೆಗೆ ಪೂರ್ಣ ಬಹುಮತ ಬಿಜೆಪಿಗೆ ಸಿಕ್ಕಿಲ್ಲ. ಈ ಬಾರಿ ನಮ್ಮ ಪಕ್ಷಕ್ಕೆ ರಾಜ್ಯದ ಜನ ಬಹುಮತ ನೀಡ್ತಾರೆ ಎಂದರು.

ಎರಡು ರಾಷ್ಟ್ರೀಯ ಪಕ್ಷಗಳು ನಾಡಿನ ಜನತೆಗೆ ಯಾವುದೇ ಒಳ್ಳೆಯ ಕೆಲಸ ಮಾಡಿಲ್ಲ. ಈ ಹಿಂದೆ ಐದು ವರ್ಷಗಳ ಕಾಲ ಕಾಂಗ್ರೆಸ್ ಅಧಿಕಾರ ನಡೆಸಿತ್ತು. ಈಗ ನಾಲ್ಕು ವರ್ಷ ಬಿಜೆಪಿ ಸರ್ಕಾರ ನಡೆಸಿದೆ. ನಾಡಿನ ಬಡವರು, ರೈತರು ಇಬ್ಬರ ಆಡಳಿತವನ್ನು ನೋಡಿ ಬೇಸತ್ತಿದ್ದಾರೆ. ಇವತ್ತು ನಮ್ಮ ಕ್ಷೇತ್ರದಲ್ಲಿ ಕೂಡ ಬೇರೆ ಬೇರೆ ಪಕ್ಷಗಳನ್ನು ತೊರೆದು ಬಹಳಷ್ಟು ಜನ ನಮ್ಮ ಪಕ್ಷಕ್ಕೆ ಸೇರಿ ಬೆಂಬಲ ಸೂಚಿಸುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಾಗಿದೆ.

ಹಿಂದೆ ಕುಮಾರಸ್ವಾಮಿರವರು ಮುಖ್ಯಮಂತ್ರಿ ಇದ್ದಾಗ ಹದಿನಾಲ್ಕು ತಿಂಗಳಲ್ಲಿ ಇಪ್ಪತ್ತೈದು ಸಾವಿರ ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದ್ದೇವು.

ಈಗ ಕೂಡ ನಮ್ಮ ಪ್ರಣಾಳಿಕೆಯಲ್ಲಿ ರೈತರಿಗೆ 24 ತಾಸು ಕರೆಂಟ್, ಸ್ವಸಹಾಯ ಗುಂಪುಗಳ ಸಾಲಮನ್ನಾ, ಪೆನ್ಷನ್ ಗಳನ್ನು ಹೆಚ್ಚಿಸುವುದು, ರೈತರ ಸಾಗುವಳಿಗಾಗಿ ಎಕರೆಗೆ ಹತ್ತು ಸಾವಿರ ರೂ. ಕೊಡುವುದು ಹೀಗೆ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದೇವೆ. ಈಗ ನಮ್ಮ ಪಕ್ಷಕ್ಕೆ ಹೆಚ್ಚಿನ ಒಲವು ಕಂಡುಬರುತ್ತಿದೆ. ಕೇವಲ ನಮ್ಮ ಕ್ಷೇತ್ರ ಮಾತ್ರವಲ್ಲ ಬೀದರ್ ನಿಂದ ಚಾಮರಾಜನಗರದ ತನಕ ಒಲವು ಇದೆ ಎಂದು ಶಾಸಕ ಬಂಡೆಪ್ಪ ಖಾಶೆಂಪುರ್ ರವರು ವಿಶ್ವಾಸ ವ್ಯಕ್ತಪಡಿಸಿದರು.

# ವೀರ ವಿರಾಗಿಣಿ ಅಕ್ಕಮಹಾದೇವಿ ಜಯಂತಿ ಆವರಣೆ



ಬೆಳಗಾವಿ: ಯೋಗ ಮತ್ತು ವ್ಯಾಯಾಮಗಳಿಂದ ಆರೋಗ್ಯವಂತರಾಗಿ ಸ್ವಾಸ್ಥ ಮನಸ್ಸು ಹಾಗೂ ಸದೃಢಆರೋಗ್ಯ ಹೊಂದಬಹುದುಎಂಬುದನ್ನು ವೀರವಿರಾಗಿಣಿ ಅಕ್ಕಮಹಾದೇವಿ ಅವರು ತಮ್ಮ ವಚನಗಳ ಮೂಲಕ ತಿಳಿಸಿದಿದ್ದಾರೆ ಎಂದು ಕದಳಿ ಮಹಿಳಾ ವೇದಿಕೆ ಜಿಲ್ಲಾಧ್ಯಕ್ಷೆ ಪ್ರೇಮಕ್ಕ–ಅಂಗಡಿಅಭಿಪ್ರಾಯ ಪಟ್ಟರು.

ಶಿವಬಸವನಗರ ಕಾರಂಜಿಮಠದ ಶಿವಾನುಭವ ಮಂಟಪದಲ್ಲಿ ವೀರವಿರಾಗಿಣಿಅಕ್ಕಮಹಾದೇವಿ ಜಯಂತಿ, 262ನೇ ಶಿವಾನುಭವಗೋಷ್ಠಿ, ಗುರುವಂದನೆ ಹಾಗೂ ಸನ್ಮಾನಕಾರ್ಯಕ್ರಮದಲ್ಲಿಉ ಪನ್ಯಾಸಕರಾಗಿ ಆಗಮಿಸಿ ಅವರು ಮಾತನಾಡಿದರು. ಯೋಗಎಂದರೆ ಒಳ್ಳೆಯ ಸಂದರ್ಭ, ಅಕ್ಕನ ವಿಚಾರದಲ್ಲಿ ಶರಣಸತಿ, ಲಿಂಗಪತಿಯಾಗಿ ಭಗವಂತನಲ್ಲಿ ಸ್ಮರಣೆಯಲ್ಲಿತೊಡಗಿರುವುದು ಶ್ರೇಷ್ಠ ಯೋಗವಾಗಿದೆ. ಎಲ್ಲಿಂದ ಬಂದೆ, ತಾಯಿಯಗರ್ಭದ ಹಿಂದಿರುವುದು ಆ ಭಗವಂತನ ಶಕ್ತಿಯಇರುವಿಕೆ. ಮತ್ತೆಎಲ್ಲಿಗೆ ಹೋಗಬೇಕಾಗಿದೆ, ಲಿಂಗದಲ್ಲಿ ಒಂದಾಗುವುದುಯೋಗ, ಅದೇ ಶಿವಯೋಗ ಎಂದರು.

ಕಾರ್ಯಕ್ರಮದಆರಂಭದಲ್ಲಿ ಗೋಕಾಕ ತಾಲೂಕಿನ ಅಂಕಲಗಿ ಅಡವಿ ಸಿದ್ದೇಶ್ವರ ಮಠದ ಗುರುಶಿದ್ಧ ಸ್ವಾಮೀಜಿಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹಂದಿಗುಂದ ಶ್ರೀ ಸಿದ್ದೇಶ್ವರ ಮಠದ ಪೂಜ್ಯ ಶಿವಾನಂದ ಸ್ವಾಮೀಜಿಅವರಿಗೆಗುರುವಂದನೆ ಹಾಗೂ ಬಾಲ ವಿಕಾಸ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಸವರಾಜಗಾರ್ಗಿಅವರಿಗೆ ಸನ್ಮಾನಿಸಲಾಯಿತು. ಕಾರಂಜಿಮಠದ ಗುರುಸಿದ್ಧ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಈ ವೇಳೆ ಸರಳಾ ಹೇರೇಕರ್, ಶ್ರೀರಂಗ ಜೋಶಿ, ಗಿರಿಜಕ್ಕಧರ್ಮರಡ್ಡಿ, ರತ್ನಪ್ರಭಾ ಬೆಲ್ಲದ ಸೇರಿ ಮತ್ತಿರರುಇದ್ದರು.

ಎ.ಕೆ.ಪಾಟೀಲ ನಿರೂಪಿಸಿದರು. ವಿ.ಕೆ.ಪಾಟೀಲ ವಂದಿಸಿದರು. ಕಾರಂಜಿಮಠದ ಮಾತೃ ಮಂಡಳಿಯಿಂದ ಸಾಮೂಹಿಕ ಪ್ರಾರ್ಥನೆ ನಡೆಯಿತು.

## ನೀತಿ ಸಂಹಿತೆ ಉಲ್ಲಂಘನೆ

### ■ ಬಿಜೆಪಿ ಜಿಲ್ಲಾಧ್ಯಕ್ಷನ ವಿರುದ್ಧ ಎಫ್‌ಐಆರ್ ದಾಖಲು

ಕಲಬುರಗಿ: ಬಿಜೆಪಿ ಪಕ್ಷದ ಚಿಹ್ನೆ ಹಾಗೂ ಜಿಲ್ಲಾಧ್ಯಕ್ಷನ ಹೆಸರಿನಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಮಾಡಿದ್ದಕ್ಕಾಗಿ ಬಿಜೆಪಿ ಕಲಬುರಗಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ ಮೇಲೆ ಎಫ್‌ಐಆರ್ ದಾಖಲಾಗಿದೆ.

ರಾಜ್ಯಾದ್ಯಂತ ನೀತಿ ಸಂಹಿತೆ ಜಾರಿಗೊಳಿಸಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ. ಈ ನಡುವೆ ಜಿಲ್ಲೆಯ ಜೇವರ್ಗಿ ತಾಲೂಕಿನಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಮಾಡಿದ ಶಿವರಾಜ್ ಪಾಟೀಲ್ ರದ್ದೇವಾಡಗಿ ಸೇರಿದಂತೆ ಐವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಶಿವರಾಜ್ ಪಾಟೀಲ್ ರದ್ದೇವಾಡಗಿ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಜೇವರ್ಗಿ ಮತಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

# ದೇಶದ ರಕ್ಷಣೆಗೆ ಕಾಂಗ್ರೆಸ್ ಅನಿವಾರ್ಯ: ಸಕಲರ ರಕ್ಷಣೆಗೆ ಕಾಂಗ್ರೆಸ್‌ಗೆ ಶಕ್ತಿ ತುಂಬಿ



ಕೊಪ್ಪಳ : ದೇಶದ ಸರ್ವತೋಮುಖ ಅಭಿವೃದ್ಧಿ, ದೇಶದ ಸಂರಕ್ಷಣೆ, ರೈತರ, ಸೈನಿಕರ ರಕ್ಷಣೆಗೆ ಕಾಂಗ್ರೆಸ್ ಗೆಲುವು ಅನಿವಾರ್ಯ ಇನ್ನು ಸಕಲರ ಹಿತ ಕಾಪಾಡಿ ಮೌಲ್ಯಯುತ ಬದುಕಿಗೆ ಮತ್ತೊಮ್ಮೆ ರಾಘಣ್ಣರನ್ನು ಬೆಂಬಲಿಸಿ ಎಂದು ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಜ್ಯೋತಿ ಎಂ. ಗೊಂಡಬಾಳ ವಿನಂತಿಸಿದರು.

ಅವರು ಕೊಪ್ಪಳ ಕ್ಷೇತ್ರದ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅವರ ಪರವಾಗಿ ಮಹಿಳಾ ಕಾಂಗ್ರೆಸ್‌ನಿಂದ ಇಂದು ವಿವಿಧ ಗ್ರಾಮಗಳಲ್ಲಿ ಭಿರುಸಿನ ಪ್ರಚಾರ ಕೈಗೊಂಡು ಜನರ ಮನ ಒಲಿಸಿದರು, ಜನರಿಗೆ ವಿಶೇಷವಾಗಿ ಮಹಿಳೆಯರಿಗೆ ಅವಶ್ಯವಿರುವ ಸಂಗತಿಗಳನ್ನು ವಿವರಿಸಿ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಕಾರ್ಡ ಎಂದರೆ ಅದು ಗ್ಯಾರಂಟಿನೇ ಹೊರತು ಬಿಜೆಪಿಯಂತೆ ಬೊಗಳೇ ಬಿಡುವದಲ್ಲ ಎಂದು ಸುಳ್ಳನ್ನೇ ಹೇಳುವ ಜನರಿಗೆ ಮೋಸವನ್ನು ಮಾಡುವದನ್ನೇ ಕಾಯಕ ಮಾಡಿಕೊಂಡ ಬಿಜೆಪಿ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 2013 ರಲ್ಲಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಮಾಡಿದ ಕೆಲಸಗಳನ್ನು ಮುಂದುವರಿಸುವದರ ಜೊತೆಗೆ ಈಗ ನೀಡಿರುವ ನಾಲ್ಕು ವಿಶೇಷ ಗ್ಯಾರಂಟಿಗಳಾದ ಉಚಿತ ವಿದ್ಯುತ್, 3000 ರೂ. ಗಳು ನಿರುದ್ಯೋಗ ಭತ್ಯೆ ಯುವ ನಿಧಿ, ಕುಟುಮಬದ ಯಜಮಾನಿಗೆ 2000 ರೂ. ಗಳ ಗೃಹಲಕ್ಷ್ಮೀ ಮತ್ತು ಪ್ರತಿಯೊಬ್ಬರಿಗೆ 10 ಕೆ.ಜಿ. ಉಚಿತ ಅಕ್ಕಿ ಮೂಲಕ ಕುಟುಂಬಗಳ ನಿರ್ವಹಣೆಯನ್ನು ಕಾಂಗ್ರೆಸ್ ಸರಕಾರವೇ ನಿರ್ವಹಿಸಲಿದೆ. ಕೊಟ್ಟ ಭರವಸೆಗಳನ್ನು ಈಡೇರಿಸುವ ಶಕ್ತಿ ಇರುವದು ಕೇವಲ ಕಾಂಗ್ರೆಸ್‌ಗೆ ಮಾತ್ರ ಎಂಬುದು ಜನರಿಗೆ ಗೊತ್ತಿದ್ದು, ಇದೊಮ್ಮೆ ಆಯ್ಕೆ ಖಚಿತವಾಗಿದೆ.

ಜನರನ್ನು ಜಾತಿ, ಧರ್ಮಗಳಿಂದ ಒಡೆದು ಆಳುವ ಮತ್ತು ವಿರೋಧ ಪಕ್ಷಗಳ ನೇತಾರರನ್ನು ದೌರ್ಜನ್ಯದ ಮೂಲಕ ಹಿಂಸೆ ಕೊಡುವ ಕಾಯಕದಲ್ಲಿ ನಿರತವಾಗಿರುವ ದೇಶದ ಪ್ರಧಾನಿಯನ್ನು ನೋಡಿದರೆ ತಲೆತಗ್ಗಿಸುವಂತೆ ಆಗುತ್ತದೆ. ಇದು ಅತ್ಯಂತ ನೋವಿನ ಸಂಗತಿ. ದೇಶದಲ್ಲಿ ಒಂದು ಪಕ್ಷದ ಪರವಾಗಿ ಮತ್ತು ಕೆಲವು ಸ್ವಹಿತಾಸಕ್ತಿ ಉದ್ಯಮಿಗಳ ಪರವಾಗಿ ಕೆಲಸ ಮಾಡುವ ಪ್ರಧಾನಿ ಸಿಕ್ಕಿದ್ದು ಇದೇ ಮೊದಲು ಎಂದು ಅವರು ಲೇವಡಿ ಮಾಡಿದರು.

ಈ ವೇಳೆ ಮಾಜಿ ಸಂಸದರಾದ ಶಿವರಾಮಗೌಡ, ಮುಖಂಡರುಗಳಾದ ಕೃಷ್ಣಾರಡ್ಡಿ ಗಲಿಬಿ, ವೆಂಕನಗೌಡ ಹಿರೇಗೌಡ್ರ, ಹನುಮರಡ್ಡಿ ಹಂಗನಕಟ್ಟಿ, ಸೌಭಾಗ್ಯಲಕ್ಷ್ಮೀ ಗೊರವರ್, ಅಂಬಿಕಾ ನಾಗರಾಳ, ಕಾವೇರಿ ರ್‍ಯಾಗಿ, ಮುತ್ತುರಾಜ ಕುಷ್ಟಗಿ, ರಾಮಣ್ಣ ಕಲ್ಲನವರ, ಪ್ರಸನ್ನ ಗಡಾದ, ಗುರುರಾಜ ಹಲಗೇರಿ, ಅಕ್ಬರ್ ಪಾಶಾ ಪಲ್ಟನ್, ಸಲೀಂ ಅಳವಂಡಿ, ಗುರುಬಸವರಾಜ ಹಳ್ಳಿಕೇರಿ, ಭರಮಣ್ಣ ನಗರ, ಪರಶುರಾಮ ಕೆರೆಹಳ್ಳಿ, ಶಿವಮೂರ್ತಿ ಗುತ್ತೂರ, ಹನುಮೇಶ ಬೆಣ್ಣಿ, ನವೋದಯ ವಿರುಪಣ್ಣ ಇತರರು ಇದ್ದರು.

## ವಿಧಾನಸಭಾ ಚುನಾವಣೆ: ಇವಿಎಂ ಪ್ರಥಮ ರ್‍ಯಾಂಡಮೈಜೇಷನ್

# ಆಯಾ ಮತಕ್ಷೇತ್ರಗಳಿಗೆ ಇವಿಎಂ ರವಾನೆಗೆ ಕ್ರಮ: ಜಿಲ್ಲಾಧಿಕಾರಿ ನಿತೇಶ್ ಪಾಟೀಲ

ಬೆಳಗಾವಿ: ವಿಧಾನಸಭಾ ಚುನಾವಣಾ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ಮಾರ್ಗಸೂಚಿ ಪ್ರಕಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತ್ತು ಮತಕ್ಷೇತ್ರಗಳ ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ ವಿದ್ಯುನ್ಮಾನ ಮತಯಂತ್ರ(ಇವಿಎಂ)ಗಳ ಕಂಪ್ಯೂಟರ್ ಆಧಾರಿತ ಪ್ರಥಮ ರ್‍ಯಾಂಡ ಮೈಜೇಷನ್(ಯಾದೃಚ್ಛಿಕ) ಪ್ರಕ್ರಿಯೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ (ಏ.4) ವಿದ್ಯುನ್ಮಾನ ಮತಯಂತ್ರ(ಇವಿಎಂ)ಗಳ ಪ್ರಥಮ ರ್‍ಯಾಂಡಮೈಜೇಷನ್ ಪ್ರಕ್ರಿಯೆ ನಡೆಯಿತು.

ಜಿಲ್ಲೆಯ ಹದಿನೆಂಟು ವಿಧಾನಸಭಾ ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಟ್ಟು 4434 ಮತಗಟ್ಟೆಗಳಿವೆ.

ಬ್ಯಾಲೆಟ್ ಯುನಿಟ್-5321(ಶೇ.120), 5321 ಕಂಟ್ರೋಲ್ ಯುನಿಟ್(ಶೇ.120) ಮತ್ತು 5765-ವಿವಿಪ್ಯಾಟ್ (ಶೇ.130)ಗಳನ್ನು ಪೂರೈಕೆ ಮಾಡಲಾಗುತ್ತದೆ.

ಮೊದಲ ಹಂತದ ಪರಿಶೀಲನೆ(ಎಫ್.ಎಲ್.ಸಿ) ಬಳಿಕ ಜಿಲ್ಲೆಯಲ್ಲಿ ಒಟ್ಟು 8257 ಬ್ಯಾಲೆಟ್ ಯುನಿಟ್, 6740 ಕಂಟ್ರೋಲ್ ಯುನಿಟ್ ಹಾಗೂ 5848 ವಿವಿಪ್ಯಾಟ್‌ಗಳು ಇರುತ್ತವೆ ಎಂದು ಜಿಲ್ಲಾಧಿಕಾರಿ ಮಾಹಿತಿಯನ್ನು ನೀಡಿದರು.



ಹೈದ್ರಾಬಾದ್ ಇಸಿಐ ಕಂಪನಿಯಿಂದ ಇವಿಎಂ ಪೂರೈಸಲಾಗಿರುತ್ತದೆ. ಅವುಗಳನ್ನು ರಾಜಕೀಯ ಪಕ್ಷಗಳ ಸಮ್ಮುಖದಲ್ಲಿ ಈಗಾಗಲೇ ಮೊದಲ ಹಂತದ ಪರಿಶೀಲನೆ(ಎಫ್.ಎಲ್.ಸಿ) ಮಾಡಲಾಗಿರುತ್ತದೆ.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು, ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮಕ್ಷಮದಲ್ಲಿ ಚುನಾವಣಾ ಆಯೋಗದ ಮಾರ್ಗಸೂಚಿ ಪ್ರಕಾರ ಪ್ರಥಮ ರ್‍ಯಾಂಡಮೈಜೇಷನ್ ನಡೆಯುತ್ತದೆ ಎಂದು ತಿಳಿಸಿದರು.

ಇದಾದ ಬಳಿಕ ಆಯಾ ಮತಕ್ಷೇತ್ರಗಳಿಗೆ ಮತಯಂತ್ರಗಳನ್ನು ಕಳುಹಿಸಲಾಗುತ್ತದೆ. ಆಯಾ ವಿಧಾನಸಭಾ ವ್ಯಾಪ್ತಿಯ ಸ್ಟ್ರಾಂಗ್ ರೂಮ್ ನಲ್ಲಿ ಸಂಗ್ರಹಿಸಿ ಇಡಲಾಗುತ್ತದೆ ಎಂದು ಹೇಳಿದರು.

ಜಿಲ್ಲೆಯ 18 ವಿಧಾನಸಭಾ ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬ್ಯಾಲೆಟ್ ಯುನಿಟ್, ಕಂಟ್ರೋಲ್ ಯುನಿಟ್ ಹಾಗೂ ವಿವಿಪ್ಯಾಟ್ ಸೇರಿ ಒಟ್ಟಾರೆ 20 ಸಾವಿರಕ್ಕೂ ಅಧಿಕ ಯಂತ್ರಗಳು ಇವೆ.

ಇವುಗಳ ಪೈಕಿ ಯಾವ ಯಂತ್ರ ಯಾವ ಕ್ಷೇತ್ರಕ್ಕೆ ಹೋಗುತ್ತದೆ ಎಂಬುದು ಯಾರಿಗೂ ಗೊತ್ತಿರುವುದಿಲ್ಲ. ಪ್ರಥಮ ರ್‍ಯಾಂಡಮೈಜೇಷನ್ ಬಳಿಕ ಯಾವ ಇವಿಎಂ ಯಾವ ಕ್ಷೇತ್ರಕ್ಕೆ ಹೋಗಲಿದೆ ಎಂಬುದು ಗೊತ್ತಾಗುತ್ತದೆ.

ಚುನಾವಣಾ ವೀಕ್ಷಕರ ಸಮ್ಮುಖದಲ್ಲಿ ಎರಡನೇ ರ್‍ಯಾಂಡಮೈಜೇಷನ್:

ಎರಡನೇ ಹಂತದ ರ್‍ಯಾಂಡಮೈಜೇಷನ್ ಪ್ರಕ್ರಿಯೆಯು ಆಯಾ ಮತಕ್ಷೇತ್ರಗಳ ಚುನಾವಣಾ ವೀಕ್ಷಕರ ಉಪಸ್ಥಿತಿಯಲ್ಲಿ ನಡೆಯಲಿದೆ. ಇದಾದ ಬಳಿಕವೇ ಯಾವ ಮತಯಂತ್ರ(ಇವಿಎಂ) ಯಾವ ಮತಗಟ್ಟೆಗೆ ಹೋಗುತ್ತದೆ ಎಂಬುದು ತಿಳಿಯುತ್ತದೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದರು.

ಪ್ರಥಮ ರ್‍ಯಾಂಡಮೈಜೇಷನ್ ಬಳಿಕ ಬೆಳಗಾವಿ ನಗರದಲ್ಲಿರುವ ಚುನಾವಣಾ ಆಯೋಗದ ಉಗ್ರಾಣದ ಮೂಲಕ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಮತಯಂತ್ರಗಳನ್ನು ಬಿಗಿ ಬಂದೋಬಸ್ತ್ ಮೂಲಕ ಕಳಿಸಲಾಗುತ್ತದೆ ಎಂದು ವಿವರಿಸಿದರು.

ಆಯಾ ಮತಕ್ಷೇತ್ರಗಳ ಸ್ಟ್ರಾಂಗ್ ರೂಮ್ ನಲ್ಲಿ ಮತಯಂತ್ರಗಳನ್ನು ಸಂಗ್ರಹಿಸಿ ಇಡಲಾಗುತ್ತದೆ.

ಅಪರ ಜಿಲ್ಲಾಧಿಕಾರಿ ಕೆ.ಟಿ.ಶಾಂತಲಾ, ಜಿಲ್ಲೆಯ ಎಲ್ಲ ಹದಿನೆಂಟು ವಿಧಾನಸಭಾ ಮತಕ್ಷೇತ್ರಗಳ ಚುನಾವಣಾಧಿಕಾರಿಗಳು ಮತ್ತು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ರ್‍ಯಾಂಡಮೈಜೇಷನ್ ಪ್ರಕ್ರಿಯೆ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮತಯಂತ್ರಗಳ ರ್‍ಯಾಂಡ ಮೈಜೇಷನ್, ಮರು ರ್‍ಯಾಂಡ ಮೈಜೇಷನ್ ಹಾಗೂ ಕೊನೆಯಲ್ಲಿ ಅಂತಿಮ ರ್‍ಯಾಂಡಮೈಜೇಷನ್ ಮಾಡುವ ಮೂಲಕ ಚುನಾವಣಾ ಆಯೋಗದ ನಿರ್ದೇಶನದ ಪ್ರಕಾರ ರ್‍ಯಾಂಡಮೈಜೇಷನ್ ಪ್ರಕ್ರಿಯೆ ಕೈಗೊಂಡು ವಿಧಾನಸಭಾ ಮತಕ್ಷೇತ್ರವಾರು ಇವಿಎಂ ಹಂಚಿಕೆಯನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಡಲಾಯಿತು.

## 7 ಲಕ್ಷ ರೂ. ಮೌಲ್ಯದ ವಿವಿಧ ಸಾಮಗ್ರಿ ವಶ



ಬೆಳಗಾವಿ: ಖಾನಾಪುರ ಪಟ್ಟಣದ ಮುಖ್ಯರಸ್ತೆಯ ಲೋಕಮಾನ್ಯ ಭವನದ ಮುಂದುಗಡೆ ನಿಂತಿದ್ದ ಗೂಡ್ಸ್ ವಾಹನದಲ್ಲಿ ಅಪಾರ ಪ್ರಮಾಣದ ವಸ್ತುಗಳನ್ನು ಪತ್ತೆ ಹಚ್ಚಲಾಗಿದ್ದು, ಒಟ್ಟು 7 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಚುನಾವಣಾಧಿಕಾರಿಗಳು ಹಾಗೂ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಿಜೆಪಿ ಮುಖಂಡ ಎ .ದಿಲೀಪ್ ಕುಮಾರ್ ಇವರ ಹೆಸರಿರುವ ಹಾಗೂ ಇವರ ಫೋಟೋ ಇರುವ, ಬಿಜೆಪಿ ಪಕ್ಷದ ಚಿಹ್ನೆ ಇರುವ ಚೀಲಗಳ ಸೇರಿದಂತೆ ಸೀರೆಗಳು, ಗೋಡೆ ಗಡಿಯಾರಗಳು, ಮದ್ಯದ ಬಾಟಲಿಗಳು ಸೇರಿದಂತೆ ವಾಹನವನ್ನು ವಶಪಡಿಕೊಳ್ಳಲಾಗಿದೆ.

ಮಿನಿ ಗೂಡ್ಸ್ ವಾಹನದಲ್ಲಿ ಸಂಗಪ್ಪ ಮಲ್ಲಿಕಾರ್ಜುನ್ ಕುಡಚಿ, ಬೆಂಡಿಗೆರೆ ಗ್ರಾಮ ಪಂಚಾಯತ್ ಮೆಂಬರ್ ಎಂಬುವರು ಬೆಳಗಾವಿ ನಗರದ ಬಾಕ್ಸೈಟ್ ರಸ್ತೆಯ ಬಸ್ ಸ್ಟ್ಯಾಂಡ್ ನಲ್ಲಿದ್ದ ವಸ್ತುಗಳನ್ನು ವಾಹನದಲ್ಲಿ ತಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಧಿಕಾರಿಗಳು ಮುಂದಿನ ಕ್ರಮ ಜರುಗಿಸಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ.

## ಲಕ್ಷಾಂತರ ರೂ. ಮೌಲ್ಯದ ಮದ್ಯ ವಶಕ್ಕೆ ಪಡೆದ ಅಬಕಾರಿ ಇಲಾಖೆ ಅಧಿಕಾರಿಗಳು




ಕಲಬುರಗಿ: ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಅಬಕಾರಿ ಇಲಾಖೆ ಹದ್ದಿನ ಕಣ್ಣಿಟ್ಟಿದ್ದು, ಕಲಬುರಗಿ ಜಿಲ್ಲೆಯ ವಿವಿಧೆಡೆ ಅಧಿಕಾರಿಗಳು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಮದ್ಯವನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಜಿಲ್ಲೆಯ ಅಫಜಲಪುರ ತಾಲೂಕಿನ ಚೌಡಾಪುರ ಬಳಿ ಅಕ್ರಮವಾಗಿ ಕಾರಿನಲ್ಲಿ ಸಾಗಿಸುತ್ತಿದ್ದ 84 ಸಾವಿನ ರೂಪಾಯಿ ಮೌಲ್ಯದ 198 ಲೀಟರ್ ಮದ್ಯವನ್ನು ವಶಕ್ಕೆ ತೆಗೆದುಕೊಂಡಿದ್ದು, ಇದಕ್ಕೆ ಸಂಬಂಧಿಸಿದಂತೆ ಶೇಖರ್ ಎಂಬಾತನನ್ನು ಬಂಧಿಸಿದ್ದಾರೆ. ಅಲ್ಲದೆ ಕಾರನ್ನು ಅಬಕಾರಿ ಇಲಾಖೆಯ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ಜಿಲ್ಲೆಯ ಚಿತ್ತಾಪುರ ತಾಲೂಕಿನ ಕುಂಬಾರ ಹಳ್ಳಿ ಕ್ರಾಸ್ ಬಳಿ ಅಕ್ರಮವಾಗಿ ಸಾಗಿಸುತ್ತಿದ್ದ 10 ಲೀಟರ್ ಕಲಬೆರಕೆ ಸೇಂದಿಯನ್ನು ವಶಕ್ಕೆ ಪಡೆಯಲಾಗಿದೆ.

ಅದರ ಜೊತೆಗೆ 15 ಸಾವಿರ ರೂಪಾಯಿ ಮೌಲ್ಯದ ಮದ್ಯ ಹಾಗೂ ಒಂದು ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ.

ಅದರಂತೆ ಸೇಡಂ ತಾಲೂಕಿನ ಬಟಗೇರಾ ಬಿ ಬಳಿ 51 ಲೀಟರ್‌ಕ್ಕಿಂತ ಅಧಿಕ ಅಕ್ರಮವಾದ ಮದ್ಯವನ್ನು ವಶಕ್ಕೆ ಪಡೆಯಲಾಗಿದ್ದು, ಮದ್ಯ ಸಾಗಿಸುತ್ತಿದ್ದ ಆರೋಪಿ ಪರಾರಿಯಾಗಿದ್ದಾನೆ. ಒಂದು ಬೈಕ್ ಹಾಗೂ 20 ಸಾವಿರ ರೂಪಾಯಿ ಮೌಲ್ಯದ ಮದ್ಯ ವಶಪಡಿಸಿಕೊಂಡು, ಆರೋಪಿಯ ಬಂಧನಕ್ಕೆ ಅಬಕಾರಿ ಇಲಾಖೆ ಅಧಿಕಾರಿಗಳು ಜಾಲ ಬೀಸಿದ್ದಾರೆ.

## 555 ನೂತನ ಪ್ರಗತಿಬಂಧು ಸ್ವ-ಸಹಾಯ ಸಂಘಗಳ ಉದ್ಘಾಟನೆ

ಬೆಳಗಾವಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆ ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಕಂಗ್ರಾಳಿ ಕೆ.ಎಚ್‌ಗ್ರಾಮದ ಶ್ರೀ ರಾಮಕೃಷ್ಣ ಹರಿ ಸಭಾಭನದಲ್ಲಿ 2023-24 ನೇ ಸಾಲಿನ ಜಿಲ್ಲಾ ಮಟ್ಟದ ನೂತನ 555 ಪ್ರಗತಿಬಂಧು ಸ- ಸಹಾಯ ಸಂಘಗಳ ಕಾರ್ಯಕ್ರಮ ಉದ್ಘಾಟಿಸಿ ಬ್ಯಾಂಕಿನ ಸೌಲಭ್ಯಗಳನ್ನು ಸ್ವ ಸಹಾಯ ಸಂಘಗಳ ಮುಖ್ಯೆನಜನರ ಮನೆ ಬಾಗಿಲಿಗೆ ತಲುಪಿಸುವಂತಹಕಾರ್ಯವನ್ನು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗೆಡೆಯವರು ಮಾಡುತ್ತಿದ್ದಾರೆ.

ಇವತು ಜನರ ಸಮಸ್ಯೆ ಮೂಲವೆ ಜ್ಞಾನ ಮತ್ತು ಹಣ . ಆರ್ಥಿಕ ಸಹಕಾರ ಹಾಗೂ ಅನಕೂಲತೆಯಿಂದ ಸಾಕಷ್ಟು ಸಮಸ್ಯೆಗಳನ್ನು ಪರಿಹರಿಸಿ ಸಮಾಜದ ಅಭಿವೃದ್ಧಿಯಾಗುತ್ತಿದೆ.

ಇದಕ್ಕೆ ಮುಖ್ಯ ಪರಿಹಾರವೆ ಸ್ವ ಸಹಾಯ ಸಂಘಗಳು. ಸ್ವ ಸಹಾಯ ಸಂಘಗಳಿಂದ ಮಹಿಳೆಯರಲ್ಲಿ ನಾಯಕತ್ವ ಗುಣಗಳು ಬೆಳೆಯುತ್ತಿದೆ ಇದರಿಂದ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ , ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುತ್ತಿವೆಎಂದು




ಮುಖ್ಯ ನಿರ್ವಹಣಾಧಿಕಾರಿ ಅನಿಲಕುಮಾರ- ಎಸ್‌ಎಸ್‌ರವರುಕ್ರಿಟಿಕಲ್ ಫಂಡ್ ಸಹಾಯಧನಚಕ್ ವಿತರಿಸಿ ಮಾತನಾಡಿದರು

ನೂತನ 40 ಪ್ರಗತಿಬಂಧು ಸ್ವ- ಸ್ವಹಾಯ ಸಂಘಗಳಿಗೆ ದಾಖಲಾತಿಗಳನ್ನು ಹಸ್ತಾಂತರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ನಿರ್ದೇಶಕರಾದ ದುಗ್ಗೆಗೌಡ, ಜಿಲ್ಲಾ ನಿರ್ದೇಶಕರಾದ ಪ್ರದೀಪ್ ಶೆಟ್ಟಿ, ಒಕ್ಕೂಟದಅಧ್ಯಕ್ಷರಾದ ಸಾವಿತ್ರಿರಜಪೂತ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಉಪಸ್ಥಿತರುವ ಎಲ್ಲರನ್ನೂಯೋಜನಾಧಿಕಾರಿ ನಾಗರಾಜ ಹದ್ಲಿರವರು ಸ್ವಾಗತಿಸಿದರು.

ವಲಯ ಮೇಲ್ವಿಚಾರಕಿ ವೈಶಾಲಿ ನಿರೂಪಿಸಿದರು.

ನಾಗಪ್ಪಗೌಡ ವಂದಿಸಿದರು. ಕಾರ್ಯಕ್ರಮದಲ್ಲಿ ಸಮನ್ವಯಧಿಕಾರಿ ಸುರೇಖಾ ಕೋಳಿ, ಕೃಷಿ ಮೇಲ್ವಿಚಾರಕ ಸತೀಶ , ಬೆಳಗಾವಿ.ಬಿ ಕಡೋಲಿ ವಲಯದ ಸೇವಾಪ್ರತಿನಿಧಿಗಳು ಒಕ್ಕೂಟದ ಪಧಾಧಿಕಾರಿಗಳು ಸ್ವ ಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು.

## ಆನ್ಲೈನ್ ಗೇಮಿಂಗ್ ಆಯಪ್ ನಲ್ಲಿ 49ರೂ. ಕಟ್ಟಿ ರಾತ್ರೋರಾತ್ರಿ 1.50 ಕೋಟಿ ರೂ. ಗೆದ್ದ ಚಾಲಕ



ಭೋಪಾಲ್: ಐಪಿ-ಎಲ್ ಆರಂಭಗೊಂಡಿದೆ. ಈ ಸಂದರ್ಭದಲ್ಲಿ ಆನ್ಲೈನ್ ಗೇಮಿಂಗ್ ಆಯಪ್ ನಲ್ಲಿ ತಮ್ಮದೇ ತಂಡವನ್ನು ರಚಿಸಿ ಹಣ ಗೆಲ್ಲುವ ಉತ್ಸಾಹದಲ್ಲಿ ಕೆಲ ಕ್ರೀಡಾಭಿಮಾನಿಗಳಿರುತ್ತಾರೆ. ಇಂಥದ್ದೇ ಕ್ರೀಡಾಭಿಮಾನಿಯೊಬ್ಬರು ಕೋಟಿ ಗೆದ್ದಿರುವ ಘಟನೆ ಮಧ್ಯಪ್ರದೇಶದ ಬರ್ವಾನಿ ಜಿಲ್ಲೆಯಲ್ಲಿ ನಡೆದಿದೆ.

ವೃತ್ತಿಯಲ್ಲಿ ಚಾಲಕನಾಗಿರುವ ಶಹಾಬುದ್ದೀನ್ ಮನ್ಸೂರಿ ಕಳೆದ ಎರಡು ವರ್ಷಗಳಿಂದ ಆನ್ಲೈನ್ ಗೇಮಿಂಗ್ ಆಯಪ್ ನಲ್ಲಿ ಟೀಮ್ ಮಾಡಿ ಅದೃಷ್ಟವನ್ನು ಪರೀಕ್ಷೆ ಮಾಡಿಸುತ್ತಲೇ ಇದ್ದಾರೆ. ಭಾನುವಾರ ಐಪಿಎಲ್ ನಲ್ಲಿ ನಡೆದ ಕೆಕೆಆರ್ ಹಾಗೂ ಪಂಜಾಬ್ ನಡುವಿನ ಪಂದ್ಯಕ್ಕೆ ತಮ್ಮ ಕನಸಿನ ತಂಡವನ್ನು ಮಾಡಿ 49 ರೂ.ಯನ್ನು ಕಟ್ಟಿದ್ದಾರೆ.

ಕೋಟಿ ಗೆಲ್ಲುವ ವಿಭಾಗದಲ್ಲಿ ತಂಡವನ್ನು ಕಟ್ಟಿದ ಶಹಾಬುದ್ದೀನ್ ಮನ್ಸೂರಿ ಪಂದ್ಯ ಮುಗಿದ ಬಳಿಕ ಕೋಟಿ ಗೆದ್ದಿದ್ದಾರೆ. ಶಹಾಬುದ್ದೀನ್ ಮನ್ಸೂರಿ ಅವರು 1.50 ಕೋಟಿ ರೂ.ವನ್ನು ಗೆಲ್ಲುವ ಮೂಲಕ ಅವರ ಜೀವನವೇ ಬದಲಾಗಿದೆ.

ಸದ್ಯ ಶಹಾಬುದ್ದೀನ್ ತನ್ನ ಆಯಪ್ ವ್ಯಾಲೆಟ್‌ನಿಂದ ರೂ 20 ಲಕ್ಷವನ್ನು ವಿತ್ ಡ್ರಾ ಮಾಡಿಕೊಂಡಿದ್ದಾರೆ. ವಿಜೇತ ಮೊತ್ತದ 1.5 ಕೋಟಿ ರೂ.ನಲ್ಲಿ ಒಟ್ಟು ರೂ.6 ಲಕ್ಷ ತೆರಿಗೆಯಾಗಿ ಕಡಿತವಾಗಿದೆ.

ಶಹಾಬುದ್ದೀನ್ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು, ಬಂದ ಹಣದಿಂದ ಸ್ವಂತ ಮನೆ ಕಟ್ಟಿ, ತಾವೇ ಒಂದು ವ್ಯಾಪಾರವನ್ನು ಆರಂಭಿಸುವುದು ಅವರ ಕನಸಗಿದೆ.

## ಅರ್ಥಪೂರ್ಣವಾಗಿ ಭಗವಾನ ಮಹಾವೀರ ಜಯಂತಿ ಆಚರಣೆ



ಹುಕ್ಕೇರಿ: ತಾಲೂಕಿನಲ್ಲಿ ಶ್ರದ್ಧ ಭಕ್ತಿಯಿಂದ ಅರ್ಥಪೂರ್ಣವಾಗಿ ಭಗವಾನ ಮಹಾವೀರ ಜಯಂತಿಯನ್ನು ಆಚರಿಸಲಾಯಿತು. ಪಟ್ಟಣದ ಆಡಳಿತ ಭವನದಲ್ಲಿ ಭಗವಾನ ಮಹಾವೀರ ತೀಥ-ಂಕರ ಭಾವ ಚಿತ್ರಕ್ಕೆ ತಹಶೀಲ್ದಾರ ಸಂಜಯ ಇಂಗಳೆ ಪೂಜೆ ಸಲ್ಲಿಸಿ ಅಹಿಂಸೆಯ ಪ್ರತಿಪಾದಕ ಭಗವಾನ ಮಹಾವೀರರ ತತ್ವಗಳು ಸಾರ್ವತ್ರಿಕ .ಅವರು ನೀಡಿದ ಸಂದೇಶ ಬದುಕಿಗೆ ನೆಮ್ಮದಿಗೆ ತಳಪಾಯವೆಂದರು.

ಹುಕ್ಕೇರಿ ತಾಲೂಕಿನ ಜೈನ್ ಅಸೋಸಿಯೇಷನ್ ಅಧ್ಯಕ್ಷ ಬಾಹುಬಲಿ ನಾಗನೂರಿ. ಪದಾಧಿಕಾರಿಗಳಾದ ವಿದ್ಯಾಧರ ಹರಾರಿ, ಶ್ರೀಮಂತ ಮಲಗೌಡನವರ, ಸಂಜಯ ನಿಲಜಗಿ, ಬಿ ಬಿ ಕಂಠಿ, ರೋಹಿತ್ ಚೌಗಲಾ, ಪ್ರಕಾಶ ಚೌಗಲಾ, ಮತ್ತಿತರರು ಉಪಸ್ಥಿತರಿದ್ದರು.

## ಭಗವಾನ್ ಮಹಾವೀರರು ಪ್ರತಿಯೊಬ್ಬರು ಪಾಲಿಸಬೇಕಾದ ತತ್ವಗಳ ನೀಡಿದ ಶ್ರೇಷ್ಠ ತೀರ್ಥಂಕರು

ಬಸ್ತವಾಡ : ತಾಲೂಕಿನ ಬಸ್ತವಾಡ ಗ್ರಾಮದಲ್ಲಿ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯ ಚೇರಮನ್ ನಿಖಿಲ್ ಕತ್ತಿ ಭಗವಾನ್ ಮಹಾವೀರ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಪ್ರತಿಯೊಬ್ಬರು ಪಾಲಿಸಬೇಕಾದ ತತ್ವಗಳನ್ನು ನೀಡಿದ ಶ್ರೇಷ್ಠ ತೀಥ-ಂಕರು ಎಂದರು.



ಕಾಡಪ್ಪಾ ಮಗದುಮ್ಮ, ನೇಮನ್ನಾ ಮಗದುಮ್ಮ ಬಸವರಾಜ ಮಟಗಾರ.ಪರಗೌಡ ಪಾಟೀಲ. ಉಪಸ್ಥಿತರಿದ್ದರು.

ಹಳ್ಳದಕೇರಿ ಜೈನಬಸದಿ: ಪಟ್ಟಣದ ಹಳ್ಳದಕೇರಿಯ ಜೈನ ಬಸ್ತಿಯಲ್ಲಿ ಮಹಾವೀರ ಮೂರ್ತಿಗೆ ಮಹಾವೀರ ಉದ್ಯೋಗ ಸಮೂಹ ಸಂಸ್ಥೆ ಅಧ್ಯಕ್ಷ ಮಹಾವೀರ ನಿಲಜಗಿ ವಿಶೇಶ ಪೂಜೆ ಸಲ್ಲಿಸಿ ಭಗವಾನ ಮಹಾವೀರ ಜಯಂತಿಯನ್ನು ಸರ್ಕಾರದ ಮಟ್ಟದಲ್ಲಿ ಆಚರಿಸಿದ ರಾಜ್ಯಸರ್ಕಾರಕ್ಕೆ ಧನ್ಯವಾದ ಸಲ್ಲಿಸಿದರು.

ಹಾಗೂ ಹಳ್ಳಿಯ ಸಂದೇಶ ವಿಶೇಶ ಮಹಾವೀರ ಕು-ರಿತ ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

ಹಿರಿಯರಾದ ಸಿ ಪಿ ಪಾಟೀಲ, ಸಂಜಯ ನಿಲಜಗಿ, ಕರಣ ಸೋಲ್ಲಾಪುರೆ, ಬಾಬುರಾವ ಸೋಲ್ಲಾಪುರೆ, ಚಂದ್ರಕಾಂತ ಮುರುಗುಡೆ, ಧನಪಾಲ ಸೋಲ್ಲಾಪುರೆ ಮೋದಲಾದ ಶ್ರಾವಕ ಶ್ರಾವಕಿಯರು ಉಪಸ್ಥಿತ-ರಿದ್ದರು.

## ಸರ್ಕಾರಿ ಜಾಗ ಅತಿಕ್ರಮಣ: ಶೀಘ್ರ ಕ್ರಮಕೈಗೊಳ್ಳದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ಬೆಳಗಾವಿ: ಹತ್ತರಗಿ ಗ್ರಾಮದ ಸರ್ವೇ ನಂ. 445 ರಲ್ಲಿ ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿದ ಯಮಕನಮರಡಿ ಅರ್ಬನ್ ಬ್ಯಾಂಕ್ ಅಧ್ಯಕ್ಷ, ಬಿಜೆಪಿ ಮುಖಂಡ ರವೀಂದ್ರ ಹಂಜಿ ಅವರ ವಿರುದ್ಧ ಸರ್ಕಾರ ಕ್ರಿಮಿನಲ್ ಕೇಸ್ ದಾಖಲಿಸಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಮುಖಂಡ ಕಿರಣ ರಜಪೂತ್ ಆಗ್ರಹಿಸಿದರು.

ಪಟ್ಟಣದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಮಕನಮರಡಿ ಅರ್ಬನ್ ಬ್ಯಾಂಕ್, ರಾಜೀವ್ ಗಾಂಧಿ ಆಸ್ಪತ್ರೆ, ವಿದ್ಯಾ ವರ್ಧಕ್ ಸಂಸ್ಥೆ ಹೆಸರಲ್ಲಿ ಒಟ್ಟರೆ 8 ಗುಂಟೆ ಜಾಗ ಸರ್ವೇ ನಂ. 445ರಲ್ಲಿ 1996ರಲ್ಲಿ ಖರೀದಿ ಮಾಡಿದ್ದಾರೆ. ಆದರೆ ಈ ಮೂರು ಸಂಸ್ಥೆಗಳ ಹೆಸರಲ್ಲಿ ಹೆಚ್ಚುವರಿಯಾಗಿ 26 ಗುಂಟೆ ಜಾಗ ಅತಿಕ್ರಮಣ ಮಾಡಿದ್ದಾರೆಂದು ದಾಖಲೆ ಸಮೇತ ಆರೋಪ ಮಾಡಿದರು.



ಈ ಜಾಗ ಖರೀದಿಸುವಾಗ ಐದು ಜನ ಬಿಡುದಾರರು ಭಾಗವಹಿಸಿದ್ದು, ಅವರ ಗಮನಕ್ಕೆ ಬಾರದೆ ನಕಲಿ ಸಹಿ ಮಾಡಿ 4 ಗುಂಟೆ ಜಾಗವನ್ನು ಖರೀಸಿದ್ದಾರೆ. 2007-2008ರಿಂದ 2023ರವರೆ ಸಾಲಿನಲ್ಲಿ ಇದೇ ಆಸ್ತಿಗೆ ಸಂದಂಧಿಸಿದಂತೆ ಗ್ರಾಪಂಗೆ ತೆರಿಗೆ ಕಟ್ಟಿದ್ದು, 2011-12ರಲ್ಲಿ 4 ಗುಂಟೆ ಜಾಗ ಮಾರಾಟಕ್ಕೆ ಸಹಕಾರ ಇಲಾಖೆಯಿಂದ ಪರವಾನಿಗೆ ಪಡೆದು ಲಿಲಾವು ಮುಖಾಂತರ ಮಾರಾಟ ಮಾಡಿದ್ದೇವೆ ಎಂಬ ಕೊಟ್ಟಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ. 2018ರಲ್ಲಿ ರಾಜೀವ್ ಗಾಂಧಿ ಆಸ್ಪತ್ರೆ ಹೆಸರಿನಲ್ಲಿ ಹತ್ತರಗಿ ಗ್ರಾಪಂನಲ್ಲಿ ದಾಖಲಾಗಿದ್ದ 4 ಗುಂಟೆ ಜಾಗದ ನೋಂದಣಿಯನ್ನು ರದ್ದುಗೊಳಿಸಬೇಕೆಂದು ಪಿಡಿಓಗೆ ಯಮಕನಮರಡಿ ಅರ್ಬನ್ ಬ್ಯಾಂಕ್‌ನಿಂದ ಪತ್ರ ಬರೆದಿರುತ್ತಾರೆ. ಒಟ್ಟಾರೇ ರವೀಂದ್ರ ಹಂಜಿಯವರು ಮಾಡಿದ್ದ ಅಕ್ರಮಗಳನ್ನು ತನಿಖೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಯಮಕನಮರಡಿ -ಹತ್ತರಗಿ ಗ್ರಾಮಸ್ಥರಿಂದ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಅತಿಕ್ರಮಣ ಕುರಿತು ಸಬಂಧಪಟ್ಟ ಇಲಾಖೆಗೆ ಹಾಗೂ ಅಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಹುಕ್ಕೇರಿ ತಹಶೀಲ್ದಾರ್, ಪಂಚಾಯತ್ ರಾಜ್ಯ ಇಲಾಖೆ, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಸರ್ಕಾರದ ಆದೇಶದಂತೆ ಈಗಾಗಲೇ ಸರ್ವೇ ಮಾಡಿಸಲಾಗಿದ್ದು, ಸರ್ಕಾರಿ ಜಾಗ ಅತಿಕ್ರಮಣವಾಗಿದೆ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ತಿಳಿಸಿದರು.

ಈ ಕುರಿತು ಬೆಳಗಾವಿ ಜಿಲ್ಲಾಧಿಕಾರಿಗಳು ಈ ಸರ್ವೇ ನಂ. ವಿವಿರ ಸಂಗ್ರಹಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಆದರೆ ಹತ್ತರಗಿ ಗ್ರಾಮದ ಸರ್ವೇ ನಂ 445ರಲ್ಲಿಅನಧಿಕೃತ ಒತ್ತುವರಿಯಾಗಿ ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಇದು ನಮ್ಮ ವ್ಯಾಪ್ತಿಗೆ ಬರುವದಿಲ್ಲ ಎಂದು ಒಬ್ಬರ ಮೇಲೆ ಇನ್ನೊಬ್ಬರು ಹಾರಿಕೆ ಉತ್ತರ ನೀಡುತ್ತಿದ್ದಾರೆ. ಶೀಘ್ರವೇ ಬಿಜೆಪಿ ಮುಖಂಡ ರವೀಂದ್ರ ಹಂಜಿ ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸದಿದ್ದಲ್ಲಿ ಉಗ್ರ ಹೋರಾಟ ಮಾಡುವುದಾಗಿ ಇದೇ ವೇಳೆ ಕಿರಣ ರಜಪೂತ್, ಸಾಮಾಜಿಕ ಕಾರ್ಯಕರ್ತ ಶಿವಶಂಕರ ಜುಟ್ಟಿ, ವೀರಣ್ಣ ಬಿಸಿರೊಟ್ಟಿ, ರಾಜೇಸಾಬ್ ಅಬ್ದುಲ್ ಗಣಿ ಪಣಿಬಂದ್ ಎಚ್ಚರಿಸಿದರು.

## ಚುರುಕು ವಾಹನಗಳ ತಪಾಸನೆ



ಹಳ್ಳೂರ: ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಅರಬಾಂವಿ ಮತಕ್ಷೇತ್ರದ ಹಳ್ಳೂರ ಗ್ರಾಮದ ಮುಧೋಳ ನಿಪ್ಪಾಣಿ ಮುಖ್ಯ ರಸ್ತೆಯಲ್ಲಿ ನಿರ್ಮಿಸಿರುವ ತಪಾಸಣಾ ಕೇಂದ್ರದಲ್ಲಿ ಮೂಡಲಗಿ ಆರಕ್ಷಕ ಠಾಣೆಯ ಕ್ರೈಮ ಪಿ ಎಸ್ ಐ ಶಿವುಕುಮಾರ್ ಬಿರಾದಾರ ನೇತೃತ್ವದಲ್ಲಿ ವಾಹನಗಳ ತಪಾಸನೆಯನ್ನು ಮಂಗಳವಾರ ಚುರುಕುಗೊಳಿಸಿದರು.

ಚೆಕ್ ಪೋಸ್ಟದಲ್ಲಿ ಪೊಲೀಸ್ ಸಿಬ್ಬಂದಿ, ಕಂದಾಯ ಇಲಾಖೆ, ಗ್ರಾಮ ಪಂಚಾಯತ್ ಅಧಿಕಾರಿಗಳು ಬೀಡು ಬಿಟ್ಟು ಮುಧೋಳ, ಮಹಾಲಿಂಗಪುರ ಕಡೆಯಿಂದ ಬರುವ ವಾಹನಗಳ ತಪಾಸನೆ ಕಾರ್ಯ ನಡೆಸಿದ್ದರು.

ಈ ಸಮಯದಲ್ಲಿ ಎಲೆಕ್ಷನ್ ಸ್ಥಿರ ಕಣ್ಣಗಾವಲು ಪಡೆ ಅಧಿಕಾರಿ ಎಚ್ ವಾಯ್ ತಾಳಿಕೋಟೆ. ಪಿ ಡಿ ಓ,ಎಲ್ ಬಿ ಉಪ್ಪಾರ.ಗ್ರಾಮ ಅಧಿಕಾರಿ ನಾಗಪ್ಪ ಕಮಲದಿನ್ನಿ. ಪೊಲೀಸ್ ಪಿ ವಿ ಕೊತವಾಲ ಸೇರಿದಂತೆ ಇನ್ನಿತರಿದ್ದರು.

# ಜೀವನದಲ್ಲಿ ಅಹಿಂಸೆ ಪಾಲನೆ ಇಂದಿನ ಅಗತ್ಯತೆ: ನ್ಯಾ. ಎಂ.ಆಯ್.ಅರುಣ

ಬೆಳಗಾವಿ: ಇಂದಿನ ಜೀವನದಲ್ಲಿ ಪ್ರತಿಯೊಬ್ಬರು ಅಹಿಂಸೆ ತತ್ವಗಳನ್ನು ಪಾಲನೆ ಮಾಡಿದ್ದಲ್ಲಿ ಎಲ್ಲರ ಜೀವನದಲ್ಲಿಯೂ ಸುಖ ಸಮೃದ್ಧಿ ಕಾಣಬಹುದು ಎಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಐ.ಅರುಣ ಅವರು ಇಂದಿಲ್ಲಿ ತಮ್ಮ ಅಭಿಪ್ರಾಯಪಟ್ಟರು.

ಬೆಳಗಾವಿಯಲ್ಲಿ ಇಂದು ಕರ್ನಾಟಕ ಸರಕಾರ, ಬೆಳಗಾವಿ ಜಿಲ್ಲಾಡಳಿತ ಹಾಗೂ ಶ್ರೀ. ಭಗವಾನ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವ ಮಧ್ಯವರ್ತಿ ಉತ್ಸವ ಸಮಿತಿಯ ಸಂಂ-ಯುಕ್ತಾಶ್ರಯದಲ್ಲಿ ನಡೆದ ಭ.ಮಹಾವೀರ ಜನ್ಮಕಲ್ಯಾಣಕ ಮಹೋತ್ಸವದ ಶೋಭಾಯಾಥ್ರೆಯನ್ನು ಉದ್ಘಾಟಿಸಿ ಮಾತನಾಡಿದರು.

ಭಗವಾನ ಮಹಾವೀರರು ಬೋಧನೆ ಮಾಡಿದ ತತ್ವಗಳು ಸರ್ವಕಾಲಿಕ ತತ್ವಗಳಾಗಿವೆ. ಮಹಾವೀರರ ತತ್ವಗಳನ್ನು ಅರ್ಥೈಸಿಕೊಂಡು ಅವುಗಳನ್ನು ಅಳವಡಿಸಿಕೊಂಡಲ್ಲಿ ಇಂದು ಇಡಿ ವಿಶ್ವ ಕಷ್ಟ ಕರ್ಪಾನ್ಯದಿಂದ ದೂರ ಇರುತ್ತಿತ್ತು. ಮನಸ್ಸು , ಮಾತು ಮತ್ತು ನಾವು ಮಾಡುವ ಕಾಯಕಗಳು ನಮ್ಮ ಹತೋಟಿಯಲ್ಲಿದ್ದರೆ ಮಾತ್ರ ಸುಖಕರ ಜೀನವ ನಡೆಸಲು ಸಾಧ್ಯ ಎಂದು ಹೇಳಿದ ಅವರು, ವಿಶ್ವದಲ್ಲಿನ ಎಲ್ಲ ಜೀವಿಗಳಿಗೂ ಬದುಕುವ ಹಕ್ಕು ಇದೆ ಎಂಬುದನ್ನು ಪ್ರಥಮ ಬಾರಿಗೆ



ಪ್ರತಿಪಾದಿಸಿದ ಧರ್ಮ ಅಂದರೆ ಅದು ಜೈನ ಧರ್ಮ, ಈ ಧರ್ಮದ ತತ್ವಗಳನ್ನು ಎಲ್ಲರೂ ಪಾಲಿಸಬೇಕೆಂದು ಅವರು ಕರೆ ನೀಡಿದರು.

ಸಮಾರಂಭದಲ್ಲಿ ಭಗವಾನ ಮಹಾವೀರರ ಪ್ರತಿಮೆಗೆ ಪೂಜೆ ಮಾಡಲಾಯಿತು.ತದನಂತರ ದೀಪ ಬೆಳಗಿಸುವ ಮೂಲಕ ಸಮಾರಂಭವನ್ನು ಉದ್ಘಾಟಿಸಲಾಯಿತು. ಇದೇ ಸಂದರ್ಭದಲ್ಲಿ ಹಳ್ಳೀಯ ಸಂದೇಶ ಪತ್ರಿಕೆಯ ಜನ್ಮಕಲ್ಯಾಣಕ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ವೇದಿಕೆ ಮೇಲೆ ಬೆಳಗಾವಿ ಮಹಾನಗರ ಪಾಲಿಕೆಯ ಆಯುಕ್ತ ರುದ್ರೇಶ ಘಾಳಿ, ಶ್ರೀಮತಿ ಅರುಣ , ಕನ್ನಡ ಮತ್ತು ಸಂಸ್ಕೃತ ಇಲಾಖೆಯ ವಿದ್ಯಾ ಭಜಂತ್ರಿ, ಜನ್ಮ ಕಲ್ಯಾಣಕ ಮಹೋತ್ಸವ ಉತ್ಸವ ಸಮಿತಿಯ ಗೌರವ ಕಾರ್ಯಾಧ್ಯಕ್ಷ ಶ್ರೀಪಾಲ ಖೇಮಲಾಪೂರೆ, ವಿನೋದ ದೊಡ್ಡಣ್ಣವರ, ಉದ್ಯಮಿ ಸಚಿನ ಪಾಟೀಲ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಉತ್ಸವ ಸಮಿತಿಯ ಗೌರವ ಕಾರ್ಯದರ್ಶಿ ರಾಜೇಂದ್ರ ಜೈನ ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ನ್ಯಾಯವಾದಿ ರವಿರಾಜ ಪಾಟೀಲ ಅತಿಥಿಗಳನ್ನು ಪರಿಚಯಿಸಿದರು, ಡಾ. ನಾಗರಾಜ ಮರೆಣ್ಣವರ ಹಾಗೂ ಅಕ್ಷಯ ಶಾಸ್ತ್ರಿ ಕಾರ್ಯಕ್ರಮ ನಿರೂಪಿಸಿದರು.

ಮೆರವಣಿಗೆಯಲ್ಲಿ ಜೈನ ಯುವ ಸಂಘಟನೆ ವತಿಯಿಂದ ಹಮ್ಮಿಕೊಳ್ಳಲಾದ 100 ಬುಲೆಟ್ ವಾಹನಗಳ ರ‍್ಯಾಲಿಯನ್ನು ಉದ್ಘಾಟಿಸಲಾಯಿತು. ತದ ನಂತರ ಶೋಭಾ ಯಾತ್ರೆಯು ಪ್ರಾರಂಭಗೊಂಡಿತು. ಈ ಶೋಭಾಯಾತ್ರೆಯಲ್ಲಿ ಸುಮಾರು 50 ರೂಪಕ ವಾಹನಗಳಲ್ಲಿ ಭಗವಾನ ಮಹಾವೀರರ ಸಂದೇಶ ಸಾರುವ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಮೆರವಣಿಗೆಯು ಸಮಾದೇವಿ ಗಲ್ಲಿಯಿಂದ ಪ್ರಾರಂಭಗೊಂಡು ರಾಮದೇವ ಗಲ್ಲಿ, ಕಿರ್ಲೋಸ್ಕರ ರೋಡ, ರಾಮಲಿಂಗಖಿಂಡ ಗಲ್ಲಿ, ಟಿಳಕಚೌಕ, ಶೇರಿ ಗಲ್ಲಿ , ಕಪಿಲೇಶ್ವರ ಸೇತುವೆ, ಎಸ್.ಪಿ.ಎಂ. ರಸ್ತೆ, ಕೋರೆ ಗಲ್ಲಿ ಗೋವಾವೇಸ ಮೂಲಕ ಮಹಾವೀರ ಭವನ ಬಳಿ ಕೊನೆಗೊಂಡಿತು. ತದನಂತರ ಅಲ್ಲಿ ಮಹಾಪ್ರಸಾದ ಕಾರ್ಯಕ್ರಮ ನಡೆಯಿತು. ಈ ಎಲ್ಲ ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಶ್ರಾವಕ-ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು, ಕಾರ್ಯಕ್ರಮಕ್ಕೆ ಶೋಭೆ ತಂದು ಕೊಟ್ಟರು.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089